ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಹತ್ತನೇ ಲೋಕಸಭಾ ಚುನಾವಣಾ ವಿಶೇಷಾಂಕ

ಭಾರತದಲ್ಲಿ ಪ್ರಜಾರಾಜ್ಯ

ಚುನಾವಣೆ ಜನತಾ ಶಿಕ್ಷಣ ಕಾಲ

ರಾಜ್ಯ ವ್ಯವಸ್ಥೆಯಲ್ಲಿ ಪರಿವರ್ತನೆ ಅಗತ್ಯ

ವಿವಿಧ ಪಕ್ಷಗಳ ದೃಷ್ಟಿಯಲ್ಲಿ ಚುನಾವಣೆ

ಸಂಪುಟ : ೧೮ ಮೇ ೧೯೯೧ ಸಂಚಿಕೆ : ೧[illegible]

ಈ ಸಂಚಿಕೆಯಲ್ಲಿ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧; ಮೇಲುಕೋಟೆ. ಮೇ ೧೫, ೧೯೯೧; ಸಂಚಿಕೆ ೧೧

ನಿಮ್ಮೊಂದಿಗೆ........

ಹತ್ತನೇ ಲೋಕಸಭಾ ಚುನಾವಣೆಗಾಗಿ ಹಾಗೂ ಒಂಭತ್ತು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಾಗಿ ಇಡೀ ದೇಶ ಕಾವೇರಿ ಕುಳಿತಿರುವ ಸಂದರ್ಭದಲ್ಲಿ 'ಜನಪದ ವಿಚಾರ' ನಿಮ್ಮ ಕೈಸೇರುತ್ತಿದೆ. ಮತದಾರರ ಒಲವು ಯಾವ ಕಡೆಗೆ ಎಂಬುದು ಪ್ರತಿಯೊಬ್ಬರ ಕಲ್ಪನೆಗೆ ಬಿಟ್ಟಿದ್ದು. ಆಯಾ ಪಕ್ಷದ ಮುಖಂಡರಿಗೆ ಮತ್ತು ಆ ಪಕ್ಷದ ಮತಿಗೆಟ್ಟ ಅಭಿಮಾನಿಗಳಿಗೆ ಮಾತ್ರ ಎಲ್ಲೆಲ್ಲೂ ಅಪರ ಪಕ್ಷಕ್ಕೇ ಜನತಾ ಸಹಾನುಭೂತಿಯ ಪ್ರವಾಹ ಹರಿದು ಬರುವಂತೆ ಗೋಚರಿಸುತ್ತಿದೆ ಮತ್ತು ಪ್ರತಿಯೊಂದು ಪಕ್ಷಕ್ಕೂ "ಇಂದು ದೇಶ ಸಂಕಟದಲ್ಲಿದೆ. ಇದೊಂದು ಪರೀಕ್ಷಾ ಕಾಲ. ಇದು ಐತಿಹಾಸಿಕ ಚುನಾವಣೆ". ದೂರದರ್ಶನ, ಆಕಾಶವಾಣಿ, ಪತ್ರಿಕೆಗಳಲ್ಲಿ ಬಿತ್ತರಗೊಳ್ಳುತ್ತಿರುವ ರಾಜಕೀಯ ಪಕ್ಷಗಳ ಮುಖಂಡರ ಹೇಳಿಕೆಗಳು 'ಅದೇ ರಾಗ, ಅದೇ ತಾನ'. ಎಲ್ಲಿಯೂ ಹೊಸತನ ಕಾಣುತ್ತಿಲ್ಲ. ಬದಲಿಗೆ ಕೊಲೆ, ಹಿಂಸೆ, ಅಶಾಂತಿಯಲ್ಲಿ ಹೆಚ್ಚಳ. ಮಾನವಕೃತ ದುಷ್ಟಪರಿಸ್ಥಿತಿ ಸಾಲದೇನೋ ಎಂಬಂತೆ ಪ್ರಕೃತಿ ವಿಕೋಪವೂ ಜೊತೆ ಸೇರಿದೆ. ಅಸ್ಸಾಂ ರಾಜ್ಯ ಪ್ರವಾಹದಿಂದ ಜೀವನ್ಮರಣ ಹೋರಾಟ ನಡೆಸುತ್ತಿದೆ. ಪಕ್ಕದ ಬಾಂಗ್ಲಾ ದೇಶದಲ್ಲಿ ಲಕ್ಷಾಂತರ ಜನ ಅಸು ನೀಗಿದ್ದಾರೆ. ಈ ಜನರ ಆರ್ತನಾದ ಕೇಳದಷ್ಟು ನಮ್ಮ ಕಿವಿ ಚುನಾವಣಾ ಧ್ವನಿವರ್ಧಕದ ಕಿರುಚಾಟದಿಂದ ಕಿವುಡಾಗಿದೆ. ಪಾಕಿಸ್ತಾನವು ಕಾಶ್ಮೀರದಲ್ಲಿ ದೊಡ್ಡ ಪ್ರಮಾಣದಲ್ಲಿ ದೇಶ ದ್ರೋಹಿಗಳನ್ನು ನುಸುಳಿಸಲು ಪ್ರಯತ್ನಿಸುತ್ತಿದೆ. ಹಾಗೆ ಮಾಡುವುದರ ಮೂಲಕ ಕಾಶ್ಮೀರ ಕಣಿವೆಯಲ್ಲಿ ಚುನಾವಣೆ ಸಮಯಕ್ಕೆ ಸರಿಯಾಗಿ ಭೀಕರ ರಾಜಕೀಯ ಅಸ್ಥಿರತೆ ಉಂಟು ಮಾಡುವ ಪ್ರಯತ್ನದಲ್ಲಿದೆ. ದೇಶದಲ್ಲಿ ಈಗ ರಾಜಕೀಯ ಮಂಥನ ನಡೆದಿದೆ. ಈ ಮಂಥನದಿಂದ ಸಧ್ಯಕ್ಕಂತೂ ಹಾಲಾಹಲ ಮಾತ್ರ ಹೊರಬರುತ್ತಿದೆ. ಆದರೆ ನಂಜನ್ನು ಕುಡಿವ ನಂಜುಂಡ ಮಾತ್ರ ಇಲ್ಲ. ಆದ್ದರಿಂದ ಆ ಹಾಲಾಹಲವನ್ನು ಸಾಮಾನ್ಯ ಮತದಾರನೇ ಕುಡಿಯಬೇಕಾಗುತ್ತದೇನೋ! ಆಗ ಅವನ ಗತಿ? ಈ ಪ್ರಶ್ನೆಗೆ ಉತ್ತರ ಕಠಿಣ. "ಜನಪದ ವಿಚಾರ"ದ ಈ ಸಂಚಿಕೆಯಲ್ಲಿ ಮಹಾತ್ಮ ಗಾಂಧೀ, ಜಯಪ್ರಕಾಶ ನಾರಾಯಣರ ಕೆಲವು ವಿಚಾರಗಳು ಪ್ರಕಟವಾಗಿವೆ. ಅವರ ವಿಚಾರಗಳು ಭಾರತೀಯ ಜನ


ಮಾನಸವನ್ನು ಸೂರೆಗೊಂಡರೆ ಮಾತ್ರ ಉಕ್ಕಿ ಬರುತ್ತಿರುವ ರಾಜಕೀಯ ಹಾಲಾಹಲ ವನ್ನು ಅಮೃತವಾಗಿ ಪರಿವರ್ತಿಸಬಹುದು. ಹಾಗಿಲ್ಲವಾದಲ್ಲಿ ಇನ್ನೂ ಅನೇಕ ವರ್ಷ ಮತದಾರ ಈ ಹಾಲಾಹಲದಲ್ಲಿಯೇ ತನ್ನ ಸಾಮರ್ಥ್ಯಕ್ಕನುಸಾರವಾಗಿ ತೇಲಿಕೊಂಡಿರ ಬಹುದು, ಅಷ್ಟೇ. ಈ ಸಂಚಿಕೆ ಒಂದು ರೀತಿಯಲ್ಲಿ 'ಚುನಾವಣಾ ಸಂಚಿಕೆ'. ಇಲ್ಲಿ ವಿವಿಧ ಪಕ್ಷಗಳ ರಾಜಕೀಯ ಹೇಳಿಕೆಗಳನ್ನು ಸಂಗ್ರಹಿಸಿ ದಾಖಲಾಗಿಸಿದೆ. ಆ ಬಗ್ಗೆ ಕೆಲವು ಅಭಿಪ್ರಾಯಗಳ ಸಂಗ್ರಹವೂ ಇದೆ. ಇವೆಲ್ಲವನ್ನು ವಿವಿಧ ಮೂಲ ಗಳಿಂದ ಪಡೆದು ಇಲ್ಲಿ ಕ್ರೋಢೀಕರಿಸಲಾಗಿದೆ. ಇದರಿಂದ ಚುನಾವಣಾ ಸಂದರ್ಭ ದಲ್ಲಿಯ ರಾಜಕೀಯ ಚಟುವಟಿಕೆಗಳ ಒಂದು ಪಕ್ಷಿನೋಟ ವಾಚಕರಿಗೆ ಸಿಗಬಹುದು.

ರಾಜಕೀಯ ಪಕ್ಷಗಳ ಪ್ರಣಾಳಿಕೆಗಳ ಮೇಲಾಟ ನಡೆಯುತ್ತಿರುವಾಗ ಒಂದು ಹೊಸ ಧ್ವನಿ ಕೇಳಿಬರುತ್ತಿದೆ. ಧ್ವನಿ ಕ್ಷೀಣವಾಗಿರಬಹುದು. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಂಥ ಧ್ವನಿಗೆ ಅವಕಾಶವಿದೆ. ಅಷ್ಟೇ ಅಲ್ಲ, ಕಾಲಕ್ರಮೇಣ ಅದು ಬಲಿಷ್ಠಗೊಳ್ಳಲೂ ಬೇಕು. ಅದುವೇ "ಶ್ರೀಸಾಮಾನ್ಯರ ಪ್ರಣಾಳಿಕೆ". ಕಳೆದ ಏಪ್ರಿಲ್ ೧೨ರಂದು ದೇಶದ ವಿವಿಧ ಜನ ಆಂದೋಳನಗಳ ಸಂಘಟನೆಗಳು ಸಭೆ ಸೇರಿ ತಯಾರಿ ಸಿದ ಪ್ರಣಾಳಿಕೆ ಇದು. ಪರ್ಯಾವರಣ, ಭೂಮಿ, ನೀರು ಮತ್ತು ಇತರ ಪ್ರಕೃತಿ ಯನ್ನು ಅಭಿವೃದ್ಧಿ ಹಾಗೂ ಬೇಡಿಕೆಗನುಗುಣವಾಗಿಯೇ ಉಳಿಸಿಕೊಂಡು ಬರಬೇಕು; ಯೋಜನೆ, ಆರ್ಥಿಕ-ರಾಜಕೀಯ ತೀರ್ಮಾನ ಇವುಗಳಲ್ಲಿ ವಿಕೇಂದ್ರೀಕರಣ ಇರಬೇಕು; ವಿವಿಧತೆಯಲ್ಲಿ ಏಕತೆ ಕಾಪಾಡಿಕೊಂಡು ಬರಬೇಕು ಈ ಮುಂತಾದವು ಆ ಪ್ರಣಾಳಿಕೆಯಲ್ಲಿ ಇವೆ. ಶ್ರೀಸಾಮಾನ್ಯನ ನಿರಂತರ ಚಿಂತನೆ, ಕಾಳಜಿ, ಭಾಗವಹಿಸು ವಿಕೆಯೇ ಪ್ರಜಾತಂತ್ರದ ಶ್ರೀರಕ್ಷೆ.

ಮಾನೇಲ್ ಚಂದ್ರಸಿರಿ ಇವಳು ಶ್ರೀಲಂಕಾದ ಹುಡುಗಿ. ಸರ್ವಿಸ್ ಇಂಟರ್ ನ್ಯಾಶನಲ್‌ನ ಸಂಪರ್ಕ ಹೊಂದಿದ್ದಾಳೆ. ಅದಕ್ಕಾಗಿ ಭಾರತಕ್ಕೆ ಬರುವ ಅವಕಾಶ ಅವಳಿಗೆ ದೊರೆಯಿತು. ಈ ಸಂದರ್ಭ ಉಪಯೋಗಿಸಿಕೊಂಡು ಜನಪದ ಸೇವಾ ಟ್ರಸ್ಟ್‌ಗೂ ಭೇಟಿ. ಇಲ್ಲಿ ಒಂದು ವಾರ-ಹತ್ತು ದಿವಸ ಇರುವ ಕಾರ್ಯಕ್ರಮ. ಭಾಷೆಯ ತೊಡಕು ಇದೆ. ಆದಾಗ್ಯೂ ಇಲ್ಲಿಯ ಪರಿಸ್ಥಿತಿಗೆ ಚೆನ್ನಾಗಿ ಹೊಂದಿ ಕೊಂಡಿದ್ದಾಳೆ. ಮುದ್ರಣಾಲಯ, ಹೊಸ ಜೀವನ ದಾರಿ, ನೇಯ್ಗೆ ಕೇಂದ್ರಗಳಲ್ಲಿ ಅಲ್ಲಿಯ ಜನರೊಂದಿಗೆ ಸೇರಿ ಕೆಲಸ ಮಾಡುತ್ತಾಳೆ. ಕೆಲಸದಲ್ಲಿ ಶ್ರದ್ಧೆಯಿದೆ, ಅಚ್ಚುಕಟ್ಟುತನ ಇದೆ. ತನ್ನ ದೇಶದಲ್ಲಿ ನಡೆಯುತ್ತಿರುವ ತಮಿಳರ ಗಲಾಟೆಯಿಂದ ಅವಳ ಮನಸ್ಸು ಖಿನ್ನವಾಗಿದೆ. ದೇಶದಲ್ಲಿ ಅಶಾಂತಿ ಇರುವುದರಿಂದ ಜನ ಜೀವನ ದಲ್ಲಿ ಮುಖ್ಯವಾಗಿ ಯುವಕರಲ್ಲಿ ಅಶಾಂತಿ, ಅಸ್ಪಷ್ಟತೆ, ಅನಿಶ್ಚಿತತೆ ಇದೆ ಯೆಂದು ಮಾನೇಲ್ ಹೇಳುತ್ತಾಳೆ.

★ ಸುರೇಂದ್ರ ಕೌಲಗಿ

ಭಾರತದಲ್ಲಿ ಪ್ರಜಾರಾಜ್ಯ



ಮಹಾತ್ಮ ಗಾಂಧೀಜಿ

ಮಾನವ ನಿರ್ಮಿತವಾದ ಯಾವ ಸಂಸ್ಥೆಯೂ ಆತಂಕ ರಹಿತವಾಗಿಲ್ಲ. ಆ ಸಂಸ್ಥೆಯ ವ್ಯಾಪ್ತಿ ಹೆಚ್ಚಾದಂತೆ, ಅದರ ದುರುಪಯೋಗವಾಗುವ ಸಂಭವವೂ ಹೆಚ್ಚಾಗುತ್ತದೆ. ಪ್ರಜಾರಾಜ್ಯವು ಒಂದು ದೊಡ್ಡ ಸಂಸ್ಥೆಯಾದುದರಿಂದ ಅದರ ದುರುಪಯೋಗವಾಗುವ ಸಂಭವವೂ ಹೆಚ್ಚು. ಹೀಗೆಂದು ಪ್ರಜಾರಾಜ್ಯವೇ ಬೇಡವೆನ್ನುವದು ಸರಿಯಲ್ಲ. ಅದರ ದುರುಪಯೋಗವು ತೀರ ಕಡಿಮೆಯಾಗುವಂತೆ ನಾವು ನೋಡಿಕೊಳ್ಳಬೇಕು. ಜನತೆಯಿಂದ ನಡೆಸಲ್ಪಟ್ಟ ರಾಜ್ಯವು ಜನತೆಯ ಅಭಿಪ್ರಾಯವನ್ನು ನಿರ್ಮಾಣ ಮಾಡುವ ಪೂರ್ವದಲ್ಲಿಯೇ ಎಂದಿಗೂ ಕಾರ್ಯೋನ್ಮುಖವಾಗಲಾರದು. ಜನತೆಯ ಅಭಿಪ್ರಾಯವು ತನಗೆ ಪ್ರತಿಕೂಲವಾದರೆ ಆ ರಾಜ್ಯವೆ ಉರುಳಿ ಬೀಳುವದು. ಶಿಸ್ತು, ವಿವೇಕಗಳಿಂದ ಯುಕ್ತವಾದ ಪ್ರಜಾರಾಜ್ಯವು ಜಗತ್ತಿನಲ್ಲಿ ಅತಿ ಶ್ರೇಷ್ಠವೆನಿಸುವದು. ಪೂರ್ವಗ್ರಹಿಕೆ ಅಜ್ಞಾನ, ಮೂಢ ನಂಬಿಕೆಗಳಿಂದ ಕೂಡಿದ ಪ್ರಜಾರಾಜ್ಯದಲ್ಲಿ ಅವ್ಯವಸ್ಥೆ ನೆಲೆಸುವದು; ತನ್ನ ಅಳಿಗಾಲವನ್ನು ಅದು ತಾನೇ ತಂದುಕೊಳ್ಳುವದು.

ಯಾವ ವಿಚಾರ ಪ್ರಣಾಲಿಯೂ ತಾನು ಹೇಳುವದೇ ನ್ಯಾಯವೆಂದು ಹೆಮ್ಮೆಪಡಕೂಡದು. ಈ ಮಾತನ್ನು ನಾನು ಅನೇಕ ಸಲ ಹೇಳಿದ್ದೇನೆ. ನಾವೆಲ್ಲರೂ ತಪ್ಪು ಮಾಡುವವರೆ; ನಮ್ಮ ನಿರ್ಣಯಗಳನ್ನು ನಾವು ಆಗಾಗ್ಗೆ ತಿದ್ದಿಕೊಳ್ಳಬೇಕಾಗುತ್ತದೆ. ನಮ್ಮ ಈ ವಿಶಾಲವಾದ ರಾಷ್ಟ್ರದಲ್ಲಿ ಎಲ್ಲ ಬಗೆಯ ಪ್ರಾಮಾಣಿಕ ಅಭಿಪ್ರಾಯಗಳಿಗೆ ಆಸ್ಪದವಿರಲೇಬೇಕು. ನಮ್ಮ ಪ್ರತಿಪಕ್ಷಗಳ ಭಿನ್ನಾಭಿಪ್ರಾಯವನ್ನು ಸರಿಯಾಗಿ ತಿಳಿದುಕೊಳ್ಳುವದು; ನಮಗೆ ಒಪ್ಪಿಗೆಯಾಗದಿದ್ದರೆ, ನಮ್ಮ ಅಭಿಪ್ರಾಯಗಳಿಗೆ ಉಳಿದವರಿಂದ ಅಪೇಕ್ಷಿಸುವ ಮನ್ನಣೆಯನ್ನೆ ಅವರ ಅಭಿಪ್ರಾಯಗಳಿಗೂ ಕೊಡುವದು–ಇದಿಷ್ಟು ನಮ್ಮ ಹಾಗೂ ಹೆರವರ ವಿಷಯದಲ್ಲಿ ನಾವು ಮಾಡಲೇಬೇಕಾದ ತೀರ ಕಡಿಮೆಯ ಕರ್ತವ್ಯವಾಗಿದೆ. ನಿರ್ದಿಷ್ಟವಾದ ಸಾರ್ವಜನಿಕ ಜೀವನಕ್ಕೆ ಈ ಸಂಗತಿಯು ಅತ್ಯಗತ್ಯವಾದ ಒರೆಗಲ್ಲಾಗಿದೆ; ಸ್ವರಾಜ್ಯಕ್ಕೆ ನಾವು ಪಾತ್ರರಾಗುವದೂ

ಇದನ್ನೇ ಅವಲಂಬಿಸಿದೆ. ನಮ್ಮಲ್ಲಿ ಸಹಾನುಭೂತಿ-ಸಹಿಷ್ಣುತೆಗಳಿರದಿದ್ದರೆ, ನಮ್ಮ ವಿವಾದಗಳನ್ನು ಪರಸ್ಪರ ಒಪ್ಪಿಗೆಯಿಂದ ನಾವು ಎಂದೂ ಬಗೆಹರಿಸಿಕೊಳ್ಳಲಾರೆವು. ಇದರಿಂದ ಮೂರನೆಯ ಪಕ್ಷದ ಮಧ್ಯಸ್ಥಿಕೆಗೆ ನಾವು ಒಪ್ಪಿಕೊಳ್ಳಬೇಕಾಗುವದು; ಹೀಗೆ ಮಾಡುವದೆಂದರೆ ವಿದೇಶೀಯ ಪ್ರಭುತ್ವಕ್ಕೆ ನಾವು ತಲೆಬಾಗಿಸಬೇಕಾಗುವದು.

ಪ್ರಜಾರಾಜ್ಯ ಹಾಗೂ ಹಿಂಸೆ, ಇವೆರಡು ಎಂದಿಗೂ ಕೂಡಿ ಸಾಗಲಾರವು. ಇಂದು ಹೆಸರಿಗೆ ಮಾತ್ರ ಪ್ರಜಾರಾಜ್ಯಗಳಾದ ರಾಷ್ಟ್ರಗಳು ಮುಂದೆ ಸುಸ್ಪಷ್ಟವಾಗಿ ಸರ್ವಾಧಿಕಾರತ್ವದ ರಾಷ್ಟ್ರಗಳಾಗುವವು. ಇಲ್ಲವೆ ಅವು ನಿಜವಾಗಿ ಪ್ರಜಾರಾಜ್ಯಗಳಾಗಿ ಉಳಿಯಬೇಕಿದ್ದರೆ, ಧೈರ್ಯದಿಂದ ಅಹಿಂಸೆಯ ತತ್ವವನ್ನು ಅವು ಅಂಗೀಕರಿಸಬೇಕು. ಅಹಿಂಸೆ, ಕೇವಲ ವ್ಯಕ್ತಿಗಳು ಆಚರಿಸಲು ಯೋಗ್ಯವಾದುದು. ಸಮಷ್ಟಿರೂಪವಾದ ರಾಷ್ಟ್ರಕ್ಕೆ ಅದು ಎಂದಿಗೂ ಸಾಧ್ಯವಿಲ್ಲವೆಂದು ಹೇಳಿದರೆ ಅದು ಅಧರ್ಮವೆನಿಸುವದು.

ಜನ್ಮತಃ ಪ್ರಜಾಸತ್ತೆಯಲ್ಲಿ ನಿಷ್ಠೆಯುಳ್ಳವನು, ಜನ್ಮತಃ ಶಿಸ್ತು-ಸಂಯಮಗಳನ್ನು ಪಾಲಿಸುವವನಾಗಿರುವನು. ಮಾನವ ಇಲ್ಲವೆ ದೈವಕೃತ ವಿಧಿನಿಯಮಗಳನ್ನು ಸಂತೋಷದಿಂದ ಪಾಲಿಸುವವರಲ್ಲಿ ಪ್ರಜಾಸತ್ತಾತ್ಮಕ ಸದ್ಗುಣವು ತಾನಾಗಿಯೆ ಬೆಳೆದು ಬರುವದು. ಪ್ರಜಾರಾಜ್ಯದ ಸೇವೆಯನ್ನು ಮಾಡುವ ಮಹತ್ವಾಕಾಂಕ್ಷೆಯುಳ್ಳವರು, ಪ್ರಜಾಸತ್ತೆಯ ಈ ನಿಷ್ಠುರವಾದ ಪರೀಕ್ಷೆಯಲ್ಲಿ ಪಾಸಾಗಿ ಅರ್ಹತೆಯನ್ನು ಪಡೆಯಬೇಕು. ಇದಲ್ಲದೆ ಪ್ರಜಾಸತ್ತೆಯಲ್ಲಿ ನಿಷ್ಠೆಯುಳ್ಳವನು ಪೂರ್ಣವಾಗಿ ನಿರಪೇಕ್ಷನಾಗಿರಬೇಕು. ಸ್ವಹಿತ-ಸ್ವಪಕ್ಷಗಳ ಬಗ್ಗೆ ಕನಸುಮನಸುಗಳಲ್ಲಿಯೂ ಕೂಡ ಯೋಚಿಸದೆ, ಅವನು ಯಾವಾಗಲೂ ಪ್ರಜಾರಾಜ್ಯದ ಹಿತವನ್ನೇ ತನ್ನ ಕಣ್ಣ ಮುಂದೆ ಇಟ್ಟುಕೊಳ್ಳಬೇಕು. ಹೀಗಿದ್ದಲ್ಲಿ ಮಾತ್ರ ಅವನಿಗೆ ಸವಿನಯ ಕಾಯಿದೆ ಭಂಗದ ಅಧಿಕಾರವು ಪ್ರಾಪ್ತವಾಗುವದು. ವ್ಯಕ್ತಿ-ಸ್ವಾತಂತ್ರ್ಯವನ್ನು ನಾನು ಮನ್ನಿಸುತ್ತೇನೆ. ಆದರೆ ಮಾನವನು ಸ್ವಭಾವದಿಂದ ಸಾಮಾಜಿಕ ಜೀವಿಯೆಂಬುದನ್ನು ಮರೆಯಲಾಗದು. ತನ್ನ ವ್ಯಕ್ತಿಜೀವನವನ್ನು ಸಾಮಾಜಿಕ ಪ್ರಗತಿಯ ಅಗತ್ಯಗಳಿಗೆ ಹೊಂದಿಸಿಕೊಳ್ಳುವದನ್ನು ಕಲಿತು ಮಾನವನು ಇಂದಿನ ಮಟ್ಟಕ್ಕೆ ಏರಿದ್ದಾನೆ. ಅನಿರ್ಬಂಧ ಸ್ವೇಚ್ಛಾಚಾರದ ಜೀವನವು ಕಾಡಿನ ಪಶು ಜೀವನವಾಗಿದೆ. ವ್ಯಕ್ತಿಸ್ವಾತಂತ್ರ್ಯ ಹಾಗೂ ಸಾಮಾಜಿಕ ಸಂಯಮ ಇವುಗಳ ನಡುವಿನ ದಾರಿಯನ್ನು ಹಿಡಿಯಲು ನಾವು ಕಲಿತುಕೊಳ್ಳಬೇಕು. ಒಟ್ಟು ಸಮಾಜದ ಹಿತಕ್ಕಾಗಿ, ಸಾಮಾಜಿಕ ನಿರ್ಬಂಧಗಳಿಗೆ ಸ್ವಯಂಪ್ರೇರಣೆಯಿಂದ ನಾವು ಬಾಗಿ ನಡೆದರೆ, ನಮ್ಮ ಹಿತವನ್ನು ಸಾಧಿಸಿಕೊಳ್ಳುವದಲ್ಲದೆ ಸಾಮಾಜಿಕಹಿತ ಸಂವರ್ಧನೆಯನ್ನು ನಾವು ಮಾಡಿದಂತಾಗುವದು.

ಕೇಂದ್ರದಲ್ಲಿ ಅಧಿಕಾರಾರೂಢರಾದ ಇಪ್ಪತ್ತು ಜನರಿಂದ ಪ್ರಜಾರಾಜ್ಯವು ನಡೆಯುಲಾರದು. ತಳದಿಂದ ತುದಿಯವರೆಗೆ ಪ್ರತಿಯೊಂದು ಹಳ್ಳಿಯ ಜನತೆಯಿಂದ ಅದರ ಕಾರ್ಯಾಚರಣೆಯಾಗಬೇಕು. ಇಂಥ ಸಾಮಾನ್ಯ ಜನತೆಗೆ ಬಂಗಾರದಂಥ ಹೃದಯವಿದೆ. ದೇಶದ ಬಗ್ಗೆ ಅವರಲ್ಲಿ ಆಸ್ಥೆಯಿದೆ. ಅವರಿಗೆ ಬೋಧಕರು, ಮಾರ್ಗದರ್ಶಕರು ಬೇಕಾಗಿದ್ದಾರೆ. ಕೆಲವೇ ಕಳಕಳಿಯ ಕಾರ್ಯಕರ್ತರು ದೊರೆತರೂ, ಸಮಗ್ರ ರಾಷ್ಟ್ರವೇ ಸಮರ್ಪಕವಾಗಿ ನಡೆಯುವಂತೆ ಮಾಡಬಹುದಾಗಿದೆ. ಜನತೆಯಿಂದಲೆ ಜನತಾ ರಾಜ್ಯವನ್ನು ಕಟ್ಟಬಹುದಾಗಿದೆ.

ಜನರಿಂದಲೆ ಆಗಲಿ, ಸರಕಾರದಿಂದಲೆ ಆಗಲಿ, ಭಯದ ವಾತಾವರಣವಿದ್ದರೆ ಪ್ರಜಾಸತ್ತೆಯ ಭಾವನೆಯೇ ನೆಲೆಯೂರಲಾರದು. ಎಷ್ಟೋ ಸಂದರ್ಭಗಳಲ್ಲಿ ಜನತೆಯಿಂದ ನಿರ್ಮಿತವಾದ ಭಯದ ಸನ್ನಿವೇಶವು ಸರಕಾರದ್ದಕ್ಕಿಂತಲೂ ಪ್ರಜಾಸತ್ತೆಯ ಬೆಳವಣಿಗೆಗೆ ಹೆಚ್ಚು ಪ್ರತಿಕೂಲವಾಗುವುದು. ಏಕೆಂದರೆ ಸರಕಾರದ್ದು ಪ್ರಜಾಸತ್ತೆಯ ಭಾವನೆಯನ್ನು ಬಲಗೊಳಿಸುತ್ತದೆ, ಜನತೆಯದು ಅದನ್ನು ನಾಶಗೊಳಿಸುತ್ತದೆ. ಪ್ರಜಾಸತ್ತೆಯ ನಿಜವಾದ ಭಾವನೆಯನ್ನು ನಾವು ಬೆಳೆಸಬೇಕಿದ್ದರೆ, ನಮ್ಮಲ್ಲಿ ಸಹಿಷ್ಣುತೆಯು ತೀರ ಅಗತ್ಯವಾಗಿದೆ. ಅದು ಇಲ್ಲದೆ ಹೋದರೆ, ನಮ್ಮ ಧ್ಯೇಯದಲ್ಲಿಯೆ ನಮಗೆ ವಿಶ್ವಾಸವಿಲ್ಲೆಂದು ವ್ಯಕ್ತವಾಗುತ್ತದೆ. ವಿಚಾರ ಹಾಗೂ ಕೃತಿ ಸ್ವಾತಂತ್ರ್ಯವನ್ನು ನಾವು ಬಯಸುವಂತೆ, ಉಳಿದವರಿಗೂ ಅವುಗಳನ್ನು ದಯಪಾಲಿಸಬೇಕು. ಬಹುಮತದ ಆಳಿಕೆಯನ್ನು ಬಲುಮೆಯಿಂದ ಹೇರಿದ್ದಾದರೆ, ಅಲ್ಪಸಂಖ್ಯಾಕವಾದ ಆಳರಸರ ಆಳಿಕೆಯಷ್ಟೆ ಅದು ಅಸಹ್ಯವಾಗುವದು. ವಿಚಾರವಿನಿಮಯ ಹಾಗೂ ಮನವೊಲಿಕೆಯಿಂದ ಅಲ್ಪಸಂಖ್ಯಾಕರನ್ನು ನಮ್ಮ ಅಭಿಪ್ರಾಯಕ್ಕೆ ಒಲಿಯುವಂತೆ ನಾವು ತಾಳ್ಮೆಯಿಂದ ಯತ್ನಿಸಬೇಕು. ಬಹುಮತದ ಆಳಿಕೆಯಲ್ಲಿ ವಿವರಗಳ ವಿಷಯದಲ್ಲಿ ಬಹುಮತಕ್ಕೆ ತಲೆಬಾಗಬೇಕಾಗುವದು. ಬಹುಮತದ ನಿರ್ಣಯಗಳು ಏನೆ ಇದ್ದರೂ, ಅವುಗಳಿಗೇನೇ ವಿಧೇಯರಾಗಿರುವದು ಗುಲಾಮಗಿರಿಯೆನಿಸುವದು. ಜನರು ಕುರಿಗಳಂತೆ ವರ್ತಿಸಿದರೆ ಅದು ಪ್ರಜಾಸತ್ತೆಯೆನಿಸದು. ಪ್ರಜಾಸತ್ತೆಯ ಆಸರದಲ್ಲಿ, ವ್ಯಕ್ತಿಯ ವಿಚಾರ ಹಾಗೂ ಕೃತಿ ಸ್ವಾತಂತ್ರ್ಯವನ್ನು ದಕ್ಷತೆಯಿಂದ ರಕ್ಷಿಸಲಾಗುವದು. ಆದುದರಿಂದ, ಬಹುಮತದವರಿಂದ ವಿಭಿನ್ನವಾಗಿ ಆಚರಿಸಲು ಅಲ್ಪ ಸಂಖ್ಯಾಕರಿಗೆ ಪೂರ್ಣ ಅಧಿಕಾರವಿರುವದೆಂದು ನನ್ನ ನಂಬಿಕೆ. ವ್ಯಕ್ತಿಯನ್ನು ಕಡೆಗಣಿಸಿದರೆ, ಸಮಾಜದಲ್ಲಿ ಮತ್ತೇನು ಉಳಿಯುವದು? ವ್ಯಕ್ತಿ ಸ್ವಾತಂತ್ರ್ಯವಿದ್ದರೆ ಮಾತ್ರ ಸಮಾಜ ಸೇವೆಗೆ ಅವನು ತನ್ನನ್ನು ಪರಿಪೂರ್ಣವಾಗಿ ಅರ್ಪಿಸಬಲ್ಲನು. ವ್ಯಕ್ತಿ–ಸ್ವಾತಂತ್ರ್ಯವನ್ನು ಕಳೆದುಕೊಂಡ ವ್ಯಕ್ತಿಯು ಕೇವಲ ಒಂದು ಯಂತ್ರದಂತಾಗುವನು. ಇಂಥವರಿಂದ ಕೂಡಿದ ಸಮಾಜವು ಅಳಿದುಹೋಗುವದು. ★

ಚುನಾವಣೆ ಜನತಾ ಶಿಕ್ಷಣ ಕಾಲ

—ಜಯಪ್ರಕಾಶ ನಾರಾಯಣ

ಚುನಾವಣೆಯು ಕಾಲ ಬಹಳ ತೀಕ್ಷ್ಣತರ ರಾಜಕೀಯ ಚಟುವಟಿಕೆಯು ಕಾಲ, ಜನತಾ ಶಿಕ್ಷಣದ ಕಾಲ. ಆದ್ದರಿಂದ ಚುನಾವಣೆಯು ಚಳುವಳಿಯಲ್ಲಿ ಈ ವಿಚಾರಗಳನ್ನು ಹರಡಿದರೆ ಹೊಸದಾಗಿ ಆರಿಸಿ ಬಂದ ಲೋಕಸಭೆಯೂ, ಸಾರ್ವಜನಿಕಾಭಿಪ್ರಾಯವೂ ಪಂಚಾಯತಿ ರಾಜ್ಯದ ಉಳಿದೆರಡು ಅಂತಸ್ತುಗಳನ್ನು ಕಟ್ಟಲು ಅಗತ್ಯವಾದ ಘಟನಾತ್ಮಕ ವ್ಯವಸ್ಥೆ ಮಾಡಲು ಸಿದ್ಧವಾದಾವು. ಈ ಅಭಿಪ್ರಾಯವುಳ್ಳ ವ್ಯಕ್ತಿಗಳೂ ಪಕ್ಷಗಳೂ ಒಟ್ಟುಗೂಡಿ ಸಾರ್ವಜನಿಕಾಭಿಪ್ರಾಯವನ್ನು ರೂಪಿಸಲು ಒಂದು ಸಮನ್ವಿತ ಪ್ರಯತ್ನ ಮಾಡಬೇಕು. ಇದಕ್ಕೆ ಪಕ್ಷಗಳ ಪ್ರತಿನಿಧಿಗಳೂ ಸಾಮಾಜಿಕ ಚಳುವಳಿಯ ಸಂಸ್ಥೆಗಳೂ–ಸರ್ವಸೇವಾ ಸಂಘದಂಥವು–ಇತರ ಇಂಥ ವ್ಯಕ್ತಿಗಳೂ ಕಲೆತು ಒಂದು ವಿಶಾಲವಾದ ಸಾಮಾನ್ಯಾಭಿಪ್ರಾಯಕ್ಕೆ ಬರಬೇಕು. ಆಮೇಲೆ ಜನರ ಮುಂದೆ, ಮುಖ್ಯವಾಗಿ ಮತದಾರರ ಮುಂದೆ ಆ ಸೂಚನೆಗಳನ್ನೂ ವಿಚಾರಗಳನ್ನೂ ಮಂಡಿಸಬೇಕು. ಪತ್ರಿಕೆಗಳ ಬೆಂಬಲವನ್ನೂ ಪಡೆಯಬೇಕು. ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದರಲ್ಲಿ, ಚರ್ಚೆ, ವಿತರಣೆ, ಬೋಧನೆಗಳ ನಿರಂತರ ಕೃಷಿಯಲ್ಲಿ ಪ್ರಮುಖ ಸಾಧನ ತಾನೆ ಪತ್ರಿಕೆಗಳು.

ಮೊದಲಿನ ನನ್ನ ಪ್ರಬಂಧದಲ್ಲಿ ಹೇಳಿದ್ದೆ – ಪಕ್ಷಗಳು ಉಮೇದುವಾರರನ್ನು ನಿಲ್ಲಿಸುವುದರಿಂದ ಮತದಾರರ ಇಚ್ಛಾ ಸ್ವಾತಂತ್ರಕ್ಕೆ ಮಿತಿಹಾಕಿ ಪ್ರಜಾತಂತ್ರವನ್ನು ಕಲುಷಿತಗೊಳಿಸಿದಂತೆ ಎಂದು. ಇಂಥ ಪದ್ಧತಿಯಲ್ಲಿ ಸ್ಪರ್ಧಿಗಳಾಗುವವರು ಪಕ್ಷದಲ್ಲಿ ಸ್ಥಾನಗಳಿಸಲು ಪಕ್ಷನಾಯಕರ ಚಿತ್ತವನ್ನು ಕಾಯಬೇಕಾಗುತ್ತದೆ. ಅದರಿಂದ ಕೇಂದ್ರೀಕರಣಕ್ಕೆ, ಅಧಿಕಾರದ ಮುಷ್ಟೀಕರಣಕ್ಕೆ ಪುಷ್ಟಿದೊರೆತು ಪ್ರಜಾತಂತ್ರ ಮತ್ತಷ್ಟು ಸಡಿಲವಾಗುತ್ತದೆ ಎಂದಿದ್ದೆ. ಆದ್ದರಿಂದ ಹೊಸ ಕ್ರಮವೊಂದನ್ನು ಹುಡುಕಿ ಜನಗಳೇ–ಮತದಾರರೇ–ಉಮೇದುವಾರರನ್ನು ನಿಲ್ಲಿಸುವಂತೆ ಮಾಡಬೇಕು ಎಂದು ಸೂಚಿಸಿದ್ದೆ. ಹೀಗಾದರೆ ಅಧಿಕಾರವನ್ನು ಕೆಳಗಿನ ಹಂತಕ್ಕೆ ಸೆಳೆಯುವ ಶಕ್ತಿ ಜನರಿಗೆ ಬಂದು, ಪ್ರಜಾತಂತ್ರದ ಪ್ರಾಣಸಮ ಕ್ರಮದಲ್ಲಿ ಅವರು ಭಾಗವಹಿಸುವ ಅವಕಾಶ ಕೊಟ್ಟು, ಅವರ ದೃಷ್ಟಿಯಲ್ಲಿ ಚುನಾವಣೆಗಳಿಗೆ ಹೆಚ್ಚು ಬೆಲೆ ಬರುವಂತೆ ಆಗುತ್ತದೆ. ಈಗ ಹುರಿಯಾಳುಗಳು 'ಪಕ್ಷ'ದ ಹುರಿಯಾಳುಗಳು. ಜನರ ಮೇಲೆ ಅವರನ್ನು ಹೇರುತ್ತಾರೆ. ನಾನು ಹೇಳುವ ಕ್ರಮದಲ್ಲಿ ಜನತೆಯ ಹುರಿಯಾಳುಗಳು. ಪ್ರಜಾತಂತ್ರದ ಬಗ್ಗೆ ಜನತೆಯ ಧೋರಣೆಯಲ್ಲಿ ಇದರಿಂದ ಅಗಾಧ ಅಂತರವಾಗುತ್ತದೆ.

ಮುಂದಿನ ಚುನಾವಣೆಗಳಲ್ಲಿ ಈ ವಿಚಾರವನ್ನು ಬಿತ್ತುವುದು ಯೋಗ್ಯ ಅಗತ್ಯ ಎನಿಸುತ್ತದೆ. ಏಕೆಂದರೆ, ಚುನಾವಣೆಗಳಿಗೂ ಇದಕ್ಕೂ ನೇರ ಸಂಬಂಧ. ಅದರ

ಮೇಲೆ ಪರಿಣಾಮ ಮಾಡಿದರೂ ಮಾಡೀತು. ಈ ಪ್ರಯತ್ನ ಬರೀ ಪ್ರಚಾರದಲ್ಲೇ ಪರ್ಯವಸಾನವಾಗಬಾರದು. ಸಾಧ್ಯವಾದಲ್ಲೆಲ್ಲ ರೂಢಿಗೆ ಬರಬೇಕು. ಈ ಪ್ರಯತ್ನ ಕೆಲವೇ ಕ್ಷೇತ್ರಗಳಲ್ಲಿ ನಡೆಯಬಹುದು. ಅದರ ಅನುಭವ ಅಮೂಲ್ಯವಾದೀತು.

ಚುನಾವಣೆಗಳ ಸಂದರ್ಭದಲ್ಲಿ ಇನ್ನೊಂದು ಸೂಚನೆಯನ್ನು ಮಾಡಬಯಸುತ್ತೇನೆ. ಸೂಚನೆ ವಿನೋಬಾಜಿಯದು. ಅದನ್ನು ಬಹಳ ಒತ್ತಿ ಹೇಳಿದಾರೆ. ಚುನಾವಣೆಯ ಪ್ರಚಾರದಲ್ಲಿ ವಿರುದ್ಧ ಪಕ್ಷಗಳವರು ತಮ್ಮ ತಮ್ಮ ಪ್ರಚಾರ ಸಭೆಗಳನ್ನು ಪ್ರತ್ಯೇಕವಾಗಿ ಮಾಡುವುದು ಪದ್ಧತಿ. ಈ ರೂಢಿಯಿಂದ ಆಗುವ ಅನೇಕ ಪರಿಣಾಮಗಳಲ್ಲಿ ಪರಸ್ಪರ ಭರ್ತ್ಸನೆ, ನಿಂದೆ, ಅಪಪ್ರಚಾರ, ಬೈಗುಳು ಹೆಚ್ಚಾಗಿ ಕಂಡಿವೆ. ಜಾತೀಯ ಮತೀಯ ಅಂಧತೆಯನ್ನೂ ಕೆರಳಿಸುತ್ತದೆ. ಇದರಿಂದ ಸಾರ್ವಜನಿಕ ಜೀವನ ಕಲುಷಿತವಾಗಿ ಜನತೆಯಲ್ಲಿ ತಪ್ಪು ತಿಳಿವಳಿಕೆಗೆ, ಅಪಪ್ರಚಾರಕ್ಕೆ ಕಾರಣವಾಗುತ್ತದೆ. ಹೀಗಾಗಿ ಜನ ನಿರ್ವಿಕಾರವಾಗಿ ಏನನ್ನೂ ತೀರ್ಮಾನಿಸಲಾರರು. ಈಗಿನ ಪದ್ಧತಿಯಲ್ಲಿ ವೆಚ್ಚವೂ ಅನಗತ್ಯವಾಗಿ ಹೆಚ್ಚು.

ಸ್ಪರ್ಧಿಗಳೂ ಅವರ ಪ್ರಚಾರಕರೂ ಎಲ್ಲರೂ ಒಂದೇ ವೇದಿಕೆಯ ಮೇಲೆ ಒಟ್ಟಿಗೆ ನಿಂತು ತಮ್ಮ ತಮ್ಮ ಧೋರಣೆಗಳನ್ನು ವಿವರಿಸಿ ಪರಸ್ಪರ ವಿಮರ್ಶೆ ಮಾಡಿದರೆ ಮುಖಾಮುಖಿಯಾಗಿ, ಪೂರ್ತಿ ಹೋಗದಿದ್ದರೂ ಈ ದೋಷಗಳನೇಕ ಕಡಿಮೆಯಾದಾವು. ಪ್ರತಿಯೊಬ್ಬರಿಗೂ ಸಮಾನ ಸಮಯ ಕೊಟ್ಟು ಅವರ ಮಾತು ಮುಗಿದ ಮೇಲೆ ಸಭಿಕರು ಪ್ರಶ್ನೆ ಕೇಳಬಹುದು.

ಎರಡು ರೀತಿಯಲ್ಲಿ ಇದನ್ನು ಮಾಡಬಹುದು. ಎಲ್ಲಾ ಪಕ್ಷಗಳ ಸ್ಪರ್ಧಿಗಳ ನಡುವೆ–ಪಕ್ಷದವರಾಗಲಿ, ಜನತೆಯ ಉಮೇದುವಾರರಾಗಲಿ, ಸ್ವತಂತ್ರರಾಗಲಿ–ಒಂದು ಒಪ್ಪಂದ ಆಗಬಹುದು. ಅಥವಾ ಒಂದು ಕ್ಷೇತ್ರದ ಮತದಾರರು ಎಲ್ಲರೂ ಒಟ್ಟಿಗೆ ಸಭೆಮಾಡಿ ಎಂದು ನಿರ್ಧರಿಸಬಹುದು. ಹೀಗೆ ಜಂಟಿ ಸಭೆಗಳು ನಡೆದ ಪಕ್ಷದಲ್ಲಿ ಚುನಾವಣೆಯ ವೆಚ್ಚ ಬಹಳ ಕಡಮೆಯಾಗುತ್ತದೆ ಎಂಬುದು ಸ್ಪಷ್ಟವಾಗಬೇಕು.

ನಮ್ಮ ಪ್ರಜಾತಂತ್ರದ ಯೋಗಕ್ಷೇಮಕ್ಕೆ ಸಂಬಂಧಿಸಿದವರೆಲ್ಲರೂ ಮುಂದಿನ ಚುನಾವಣೆಯಲ್ಲಿ ಈ ಅಭ್ಯಾಸ ರೂಢಿಗೆ ಬರುವಂತೆ ಕೂಡಿ ಪ್ರಯತ್ನಿಸಬೇಕು. ಇಡೀ ದೇಶದಲ್ಲಿ ಅಲ್ಲದಿದ್ದರೂ ಸಾಕಷ್ಟು ವಿಸ್ತಾರವಾಗಿ ಈ ರೂಢಿಯನ್ನು ಬಿತ್ತಬೇಕು.

ಮೇಲೆ ಹೇಳಿದುದನ್ನು ೧೯೩೭ರ ಚುನಾವಣೆಗಳಲ್ಲಿ ಬಿಹಾರದ ಪೂರ್ಣಿಯಾ ಜಿಲ್ಲೆಯ ಸಮೇಲಿ ಹಳ್ಳಿಯಲ್ಲಿ ಪ್ರತ್ಯಕ್ಷವಾಗಿ ನಡೆಸಿತ್ತು. ಈ ವಿಷಯ ರೋಚಕವಾಗಿದ್ದೀತು. ಎಲ್ಲ ಉಮೇದುವಾರರೂ ಒಟ್ಟಿಗೆ ಮಾತಾಡುವುದಾದರೆ ಸಭೆ, ಇಲ್ಲದಿದ್ದರೆ ಸಭೆ ಇಲ್ಲ ಎಂದು ಆ ಹಳ್ಳಿಯ ಜನ ಎಚ್ಚರಿಕೆ ಕೊಟ್ಟಿದ್ದರು. ಆ ರೀತಿ ಒಂದು ಒಪ್ಪಂದವಾಗಿ ಅಲ್ಲಿ ಒಂದೇ ಒಂದು ಜಂಟಿ ಸಭೆ ನಡೆಯಿತು. ೧೯೩೭ರಲ್ಲಿ

ಸಮೇಲಿ ಮಾಡಿದ್ದನ್ನ ೧೯೭೨ರಲ್ಲಿ ಎಲ್ಲಾ ಹಳ್ಳಿಗಳೂ ಮಾಡಬಹುದು.

ಇಲ್ಲಿ ಹೇಳಿದ ವಿಚಾರ ಸಫಲಪಾಗಬೇಕಾದರೆ, ಸಾಮಾಜಿಕ-ರಾಜಕೀಯ ಶಿಕ್ಷಣದ ದೃಷ್ಟಿಯಿಂದಾಗಲಿ ಪ್ರತ್ಯಕ್ಷ ಪ್ರಯೋಗದ ದೃಷ್ಟಿಯಿಂದಾಗಲಿ ನಗರ ಪ್ರದೇಶಗಳನ್ನು ಇದರ ಪ್ರಭಾವದಿಂದ ದೂರ ಇಡದಂತೆ ನೋಡಿಕೊಳ್ಳಬೇಕು. ಪಂಚಾಯತಿ ರಾಜ್ಯ, ಸಮಾಜ ವಿಕಾಸಗಳ ಕಾರ್ಯಕ್ರಮಗಳು ಸಂಪೂರ್ಣವಾಗಿ ನಗರ ಪ್ರದೇಶಗಳನ್ನು ಕೈಬಿಡುತ್ತವೆಯಾದುದರಿಂದ ಇದು ಮತ್ತಷ್ಟು ಅಗತ್ಯ.

ಪಂಚಾಯತಿರಾಜ್ಯದ ಸೂತ್ರಗಳ ಪ್ರಕಾರವೇ ನಗರ ಪ್ರದೇಶಗಳಲ್ಲಿ ಸ್ವರಾಜ್ಯವನ್ನು ಸ್ಥಾಪಿಸಬಹುದು. ಹೇಗೆಂಬುದನ್ನು ಮೊದಲೇ ತಿಳಿಸಿದೇನೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಇದಕ್ಕೆ ತಕ್ಕ ಕಾರ್ಯವನ್ನು ಕೈಗೊಳ್ಳಬೇಕು. ಇದರ ಫಲವಾಗಿ ಆದಷ್ಟು ಬೇಗ ಈಗಿರುವ ನಗರ ಪಾಲಿಕೆಗಳ ಶಾಸನಗಳು ಬದಲಾಗಬೇಕು. ಇದಕ್ಕೆ ಬೇಕಾದ ಉಪಕ್ರಮವನ್ನು ಪೌರಸಭೆಗಳ ಸಮ್ಮೇಳನಗಳಾಗಲಿ ಅಖಿಲ ಭಾರತ ಪಂಚಾಯತಿ ಪರಿಷತ್ತಾಗಲಿ ಮಾಡಬಹುದು.

ಈ ಮಧ್ಯೆ, ಇರುವ ಶಾಸನಗಳ ಮೂಲಕವೂ ಈ ವಿಚಾರಗಳಲ್ಲಿ ಸಾಧ್ಯವಾದಷ್ಟನ್ನು ರೂಢಿಸಬೇಕು. ಉದಾಹರಣೆಗೆ: ನಗರ ಪಾಲಿಕೆಯ ವ್ಯವಹಾರದಲ್ಲಿ ಪಕ್ಷ ರಾಜಕೀಯವನ್ನು ತಾರದಂತೆ ಸಾರ್ವಜನಿಕರಿಗೂ ರಾಜಕೀಯ ಪಕ್ಷಗಳಿಗೂ ತಿಳಿಸಿ ಹೇಳಬಹುದು. ಎಂದರೆ ಪೌರಸಭೆಯ ಚುನಾವಣೆಗಳಿಗೆ ರಾಜಕೀಯ ಪಕ್ಷಗಳು ಉಮೇದುವಾರರನ್ನು ನಿಲ್ಲಿಸದಂತೆ ಒಪ್ಪಂದವಾಗಬೇಕು. ಈ ಚುನಾವಣೆಗಳಿಗೂ ಕೂಡ ಮೇಲೆ ಹೇಳಿದ ರೀತಿಯಲ್ಲಿ ಮತದಾರಸಂಘಗಳ ಮೂಲಕವೇ ಸ್ಪರ್ಧಿಗಳನ್ನು ಆರಿಸಬೇಕು. ಅದೇ ರೀತಿಯಲ್ಲಿ ಅದೇ ಕಾರಣಗಳಿಗಾಗಿ ಸಮಾಜದಲ್ಲಿ ವಿಭಾಗಗಳಾಗದಂತೆ ಸ್ಪರ್ಧೆ ನಡೆಯದಂತೆ ಮಾಡಲು ಸರ್ವಸಮ್ಮತವಾದ ಉಮೇದುವಾರರನ್ನು ನಿಲ್ಲಿಸಲು ಪ್ರಯತ್ನಿಸಬೇಕು. ಸಮಾಜದಲ್ಲಿ ಈಗಿರುವ ಭೇದ, ವಿಭಾಗ, ಅಸಮಾನತೆ, ಘರ್ಷಣೆಗಳನ್ನು ಪ್ರಜಾತಂತ್ರದ ಕ್ರಿಯಾವಿಧಾನ ಹೆಚ್ಚಿಸಬಾರದು. ಅವನ್ನು ಸವರಿ ಸಾರಿಸಿ ಕ್ರಮೇಣ ಸಾಮಾಜಿಕ ಪ್ರವೃತ್ತಿಯ ವಿಕಾಸದಿಂದ ಸರ್ವರ ಕಲ್ಯಾಣಕ್ಕಾಗಿ ಸಾಮೂಹಿಕ ಪ್ರಯತ್ನದಿಂದ ಅವನು ಅಳಿಯಿಸಬೇಕು. ಸಧ್ಯ ದೇಶದ ರಾಜಕೀಯ ವಾತಾವರಣ ಏನೋ ಪೆಡಸು, ಅನಿಶ್ಚಯ, ಗಾಬರಿಗಳಿಂದ ತುಂಬಿದೆ. ದೇಶದ ಭವಿಷ್ಯ-ಭಾಗ್ಯ ಒಬ್ಬಿಬ್ಬರು ಮಹಾನಾಯಕರ ಕೈಯಲ್ಲಿದ್ದಂತೆ ಇದೆ. ಇದು ಬಹಳ ಅಸ್ಥಿರ ಸನ್ನಿವೇಶ. ತಮ್ಮ ಭವಿಷ್ಯವನ್ನು ತಾವೇ ವಹಿಸಿಕೊಂಡು ತಮ್ಮ ನಿಶ್ಚಯದಂತೆ ಅದನ್ನು ರೂಪಿಸುವ ಪ್ರಯತ್ನವನ್ನು ಜನರೇ ಮಾಡುವುದೊಂದೇ ಇದಕ್ಕೆ ಪರಿಹಾರ. ಜನರು ಆಹ್ವಾನವನ್ನು ಅಂಗೀಕರಿಸಿಯಾರೆ? ಅಂಗೀಕರಿಸದಿದ್ದರೆ ಹಣೆಯ ಬರೆಹ ಗೊತ್ತೇ ಇದೆ. ★

ರಾಜ್ಯ ವ್ಯವಸ್ಥೆಯಲ್ಲಿ ಪರಿವರ್ತನೆ ಅಗತ್ಯ

—ಪಿ. ವೆಂಕೋಬರಾವ್

ನಾವು ಪ್ರಜಾಪ್ರಭುತ್ವವನ್ನೊಪ್ಪಿಕೊಂಡಿದ್ದೇವೆ. ಪ್ರಜೆಗಳ ಪ್ರಭುತ್ವ ನಮ್ಮ ವ್ಯವಸ್ಥೆಯಾಗಬೇಕು. ಆದರೆ ಇಂದು ನಡೆಯುತ್ತಿರುವುದು ತಿರುಗು ಮುರುಗು. ರಾಜಕೀಯ ಪಕ್ಷಗಳು ನಿಲ್ಲಿಸುವ ಅಭ್ಯರ್ಥಿಗಳನ್ನು ಜನ ಆರಿಸುತ್ತಾರೆ. ಪಕ್ಷದ ಅಭ್ಯರ್ಥಿಗಳಿಗೇ ಜನ ಮತ ನೀಡುವುದು. ಹೀಗೆ ಆರಿಸಿ ಬಂದ ಪ್ರತಿನಿಧಿಗಳು ಸೇರಿ ಸರ್ಕಾರವನ್ನು ರಚಿಸುತ್ತಾರೆ. ಇದು ಪ್ರತಿನಿಧಿಗಳ ಸರ್ಕಾರವಾಯಿತೇ ಹೊರತು ಜನತಾ ಸರ್ಕಾರವಾಗಲಿಲ್ಲ. ಆರಿಸಿಬಂದ ಪ್ರತಿನಿಧಿಗಳ ಮೇಲೆ ಪಕ್ಷಗಳ ಹಿಡಿತವಿರುತ್ತದೆ. ಪಕ್ಷದ ನೀತಿಗೆ ಆತ ಬದ್ಧನಾಗಿರಬೇಕು. ಪಕ್ಷಕ್ಕೇ ಆತನ ಮೊದಲ ನಿಷ್ಠೆ. ಈಗ ಅದೂ ಇಲ್ಲವಾಗಿದೆ. ತತ್ವರಾಜಕಾರಣ ಈಗ ಯಾರಿಗೂ ಬೇಕಾಗಿಲ್ಲ. ತತ್ವರಹಿತ ರಾಜಕಾರಣ ಸಪ್ತಮಹಾಪಾತಕಗಳಲ್ಲಿ ಒಂದು ಎಂದಿದ್ದರು ಗಾಂಧೀಜಿ. ಇಂತಹ ರಾಜಕಾರಣವನ್ನು ಈಗ ಎಲ್ಲರೂ ಮಾಡುತ್ತಿದ್ದಾರೆ. ಹಣ, ಅಧಿಕಾರ, ಗೂಂಡಾಗಿರಿ, ನೈತಿಕ ಅಧಃಪತನ, ಕುಡಿತ, ಗುಂಪುಗುಳಿತನ, ಜಾತೀಯತೆ ಇಂದಿನ ರಾಜಕೀಯದಲ್ಲಿ ಹಾಸು ಹೊಕ್ಕಾಗಿ ಸೇರಿಹೋಗಿವೆ. ಇದರಿಂದ ಪಾರಾಗಿ ಬರಬೇಕೆಂದಿದ್ದರೆ ಈ ಅಭೇದ್ಯ ಕೋಟೆಯನ್ನು ಭೇದಿಸಲೇಬೇಕು. ಇದು ಯುವಶಕ್ತಿ ಮತ್ತು ಜನಶಕ್ತಿಯಿಂದ ಮಾತ್ರ ಸಾಧ್ಯ.

ಇಂದಿನ ಚುನಾವಣೆಯಲ್ಲಿ ಮತ ಚಲಾಯಿಸುವ ಮಟ್ಟಿಗೆ ಮಾತ್ರ ಮತದಾರನಿಗೆ ಹಕ್ಕುಂಟು. ಆಮೇಲೆ ಆತನ ಪಾತ್ರವೇನು? ಆರಿಸಿಬಂದ ಪ್ರತಿನಿಧಿಯ ಮೇಲೆ ಯಾವ ಹಿಡಿತವುಂಟು ಆತನಿಗೆ? ತನ್ನ ಪ್ರತಿನಿಧಿ ಪಥ ಭ್ರಷ್ಟನಾದರೆ, ಮತದಾರರಿಗೆ ಸೇವೆ ಸಲ್ಲಿಸುವ ಬದಲು ಸ್ವಾರ್ಥಿಯಾಗಿ ಭೋಗವಿಲಾಸದಲ್ಲಿ ತೊಡಗಿದರೆ, ಪ್ರಭುವೆನಿಸಿರುವ ಮತದಾರನ ಕರ್ತವ್ಯವೇನು? ನಮ್ಮ ಸಂವಿಧಾನದಲ್ಲಿ ಇದಕ್ಕೆ ಯಾವುದೇ ಪರಿಹಾರವಿಲ್ಲ. ಅದಕ್ಕಾಗಿ ಜಯಪ್ರಕಾಶರು ಭ್ರಷ್ಟ ಪ್ರತಿನಿಧಿಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಅಧಿಕಾರ (ರೈಟ್ ಆಫ್ ರಿಕಾಲ್) ಜನತೆಗಿರಬೇಕು, ಸಂವಿಧಾನದಲ್ಲಿ ಇಂತಹ ಅಧಿಕಾರದ ಸೇರ್ಪಡೆಯಾಗಬೇಕು ಎಂದಿದ್ದರು. ಅವರು ಬಯಸಿದ್ದ 'ಸಂಪೂರ್ಣ ಕ್ರಾಂತಿ'ಯಲ್ಲಿ ಇದೂ ಅವರ ಒಂದು ಬೇಡಿಕೆಯಾಗಿತ್ತು. ರಾಜಕೀಯ ಪಕ್ಷಗಳಲ್ಲಿ ಒಳ್ಳೆಯ ಜನ ಇಲ್ಲವೆಂದಲ್ಲ. ಇದ್ದಾರೆ. ಆದರೆ ನಮ್ಮ ಮುಂದಿರುವ ಪ್ರಶ್ನೆ ಇದಲ್ಲ. ವಿಕೇಂದ್ರಿತ ರಾಜ್ಯವ್ಯವಸ್ಥೆ ಮತ್ತು ಅರ್ಥವ್ಯವಸ್ಥೆಯನ್ನೊಪ್ಪಿಕೊಂಡಿರುವ ಪಕ್ಷ ಯಾವುದಿದೆ ನಮ್ಮಲ್ಲಿ? ಇಂತಹ ವ್ಯವಸ್ಥೆಗಾಗಿ

೧೨ ನೇ ಪುಟ ನೋಡಿ

ಚುನಾವಣೆ : ಜನತಾ ದಳದ ದೃಷ್ಟಿಯಲ್ಲಿ

—ರಾಮಕೃಷ್ಣ ಹೆಗ್ಗಡೆ

ಅನಿರೀಕ್ಷಿತವಾಗಿ ಬಂದಿರುವ ಲೋಕಸಭೆಯ ಚುನಾವಣೆಗೆ ಯಾರು ಕಾರಣ? ಇದನ್ನು ಮೊದಲು ಮತದಾರ ಅರಿಯಲೇಬೇಕು. ರಾಷ್ಟ್ರೀಯ ರಂಗ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಬಿ. ಜೆ. ಪಿ. ಹಿಂತೆಗೆದುಕೊಂಡ ನಂತರ ಕಾಂಗ್ರೆಸ್ (ಐ) ಸಹ ಚಂದ್ರಶೇಖರ್ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿತು. ಈ ಎರಡು ಪಕ್ಷಗಳು ಕೊಟ್ಟ ಮಾತಿನಂತೆ ನಡೆಯಲಿಲ್ಲ. ಅದಕ್ಕೆ ಕೊಟ್ಟಂಥ ಕಾರಣ ಕ್ಷುಲ್ಲಕ ಮತ್ತು ಅಸಮರ್ಥನೀಯ. ರಾಷ್ಟ್ರೀಯ ರಂಗ ಸರ್ಕಾರವು ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರ ನಿರ್ಮಾಣವನ್ನು ಎಂದೂ ವಿರೋಧಿಸಿಲ್ಲ. ಸುಂದರವಾದ ಮಂದಿರದ ನಿರ್ಮಾಣ ಆಗಬೇಕು. ಆದರೆ ೫ ಶತಮಾನಗಳ ಹಿಂದಿನ ಒಂದು ಮಸೀದಿಯನ್ನು ಕೆಡವಿ ಆ ಜಾಗದಲ್ಲಿ ಮಂದಿರದ ನಿರ್ಮಾಣ ಯೋಗ್ಯವಲ್ಲ ಎನ್ನುವುದು ನಮ್ಮ ನಿಲುವು. ಇನ್ನು ಮಂಡಲ್ ಕಮೀಷನ್ ವರದಿಯನ್ನು ಜಾರಿಗೆ ತರುವುದು: ಈ ವಿಚಾರವನ್ನು ಯಾವ ರಾಷ್ಟ್ರೀಯ ರಾಜಕೀಯ ಪಕ್ಷವು ವಿರೋಧಿಸಿರಲಿಲ್ಲ. ಆದರೂ ಈ ನೆಪಗಳ ಮೇಲೆ ಬಿ. ಜೆ. ಪಿ. ಇನ್ನೂ ೧ ವರ್ಷ ಕಳೆಯದ ರಾಷ್ಟ್ರೀಯ ರಂಗ ಸರ್ಕಾರವನ್ನು ಉರುಳಿಸಿತು.

ಸಿ.ಬಿ.ಐ. ರಿಪೋರ್ಟ್ ಪ್ರಕಾರ ರಾಜೀವ್ ಗಾಂಧಿಯವರು ತಮ್ಮ ಪಕ್ಷದವರೂ ಸೇರಿದಂತೆ ೪೯೦ ರಾಜಕೀಯ ನಾಯಕರ ಟೆಲಿಫೋನ್ ಕದ್ದಾಲಿಕೆಯ ತಪ್ಪಿತಸ್ಥರು. ಆದರೂ ಇಬ್ಬರು ಪೋಲಿಸ್ ಪೇದೆಗಳು ತಮ್ಮ ಮನೆ ಮುಂದೆ ನಿಂತಿದ್ದರ ಹಾಸ್ಯಸ್ಪದ ಕಾರಣದಿಂದ ಕೊಟ್ಟ ಮಾತಿಗೆ ವಿರೋಧವಾಗಿ ಚಂದ್ರಶೇಖರ್ ಸರ್ಕಾರಕ್ಕೆ ಕೊಟ್ಟ ಬೆಂಬಲವನ್ನು ಹಿಂತೆಗೆದುಕೊಂಡರು. ಆದುದರಿಂದ ಈ ಚುನಾವಣೆ ಅನಗತ್ಯವಾಗಿದ್ದರೂ ದೇಶದ ಜನತೆಗೆ ಪುನಃ ಖಚಿತವಾದ ನಿರ್ಣಯವನ್ನು ಕೊಡುವ ಅವಕಾಶವನ್ನು ಕೊಟ್ಟಿದೆ.

ಇಂದು ರಾಷ್ಟ್ರದ ಜನತೆಯ ಮುಂದಿರುವ ಪ್ರಶ್ನೆ ರಾಮ ಜನ್ಮ ಭೂಮಿ ಅಲ್ಲ. ರಾಜೀವ ಗಾಂಧಿ ಹಾಡುತ್ತಿರುವ ಅವರದೇ ಮಾದರಿಯ ಸುಭದ್ರತೆಯೂ ಅಲ್ಲ. ರಾಷ್ಟ್ರದ ಐಕ್ಯವನ್ನು, ಸಮಗ್ರತೆಯನ್ನು ಕಾಪಾಡುವ ಸರ್ವಧರ್ಮ ಸಮಾನತೆ, ಸಾಮಾಜಿಕ ನ್ಯಾಯದ ಮೂಲಕ ಸಮಾಜದ ಭದ್ರತೆ, ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳ ವಿಕೇಂದ್ರೀಕರಣದಿಂದ ನಿಜವಾದ ಜನತಂತ್ರದ ಅನುಷ್ಠಾನ ಮತ್ತು ಮಧ್ಯಮ ವರ್ಗದ ಮತ್ತು ಬಡಜನರನ್ನು ಬೆಲೆ ಏರಿಕೆಯ ಪಾಶದಿಂದ

ತಪ್ಪಿಸುವುದು—ಇವೇ ಮುಖ್ಯ ಪ್ರಶ್ನೆಗಳು, ಇವುಗಳನ್ನು ಕೇವಲ ಘೋಷಣೆಗಳಿಂದ ಸಾಧಿಸಲಾಗದು.

ಕಾಂಗ್ರೆ ಪಕ್ಷವೇ ಅಸ್ಥಿರತೆಗೆ ಮೂಲ ಕಾರಣವೆಂದು ಕಳೆದ ೨೦ ವರ್ಷಗಳ ಇತಿಹಾಸ ಸಾರಿ ಹೇಳುತ್ತಿದೆ. ವಿರೋಧಿ ಪಕ್ಷಗಳ ಸರ್ಕಾರಗಳನ್ನಷ್ಟೇ ಅಲ್ಲದೆ ಕಾಂಗ್ರೆ ತನ್ನ ಸರ್ಕಾರಗಳನ್ನೂ ಅನೇಕ ಬಾರಿ ಕೆಡವಿ ಆಡಳಿತ ಯಂತ್ರವನ್ನು ಅಭದ್ರಗೊಳಿಸಿದೆ. ಶಾಸಕಾಂಗಗಳನ್ನು ಅಸ್ಥಿರಗೊಳಿಸಿದೆ. ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ನಿರ್ವೀರ್ಯಗೊಳಿಸಿದೆ. ನ್ಯಾಯಾಂಗದ ಪ್ರತಿಷ್ಠೆಯನ್ನು ನಾಶಗೊಳಿಸಿದೆ. ಸರ್ಕಾರದ ಅಂಗಾಂಗಗಳನ್ನೂ ಭ್ರಷ್ಟಗೊಳಿಸಿದೆ. ತತ್ವನಿಷ್ಠ ರಾಜಕಾರಣಿಗಳನ್ನು ಮುಗಿಸಲು ಸಕಲ ಪ್ರಯತ್ನ ಮಾಡಿದೆ.

ರಾಜೀವ್ ಗಾಂಧಿ, ಅದಕ್ಕೂ ಮೊದಲು ಇಂದಿರಾ ಗಾಂಧಿ ಹೇಳುವ ಭದ್ರತೆ ರಾಷ್ಟ್ರದ ಭದ್ರತೆ ಅಲ್ಲ. ಅದು ತಾವು ಮತ್ತು ತಮ್ಮ ಕುಟುಂಬದವರು ಅಧಿಕಾರದಲ್ಲಿ ಭದ್ರವಾಗಿರುವುದು ಮತ್ತು ಸ್ಥಿರವಾಗಿರುವುದು. ಅವರ ಸ್ವಂತ ರಾಜ್ಯವಾದ ಉತ್ತರ ಪ್ರದೇಶದಲ್ಲಿ ಯಾವ ಒಂದು ಸರ್ಕಾರವೂ ತನ್ನ ಪೂರ್ಣಾವಧಿಯನ್ನು ಮುಗಿಸಲಿಲ್ಲ. ಅನೇಕ ಕಾಂಗ್ರೆ ಆಡಳಿತದ ರಾಜ್ಯಗಳಲ್ಲಿ ವರ್ಷಕ್ಕೊಂದು ಮುಖ್ಯಮಂತ್ರಿಗಳಾಗಿದ್ದಾರೆ. ಮಹಾರಾಷ್ಟ್ರದಲ್ಲಿ ೫ ವರ್ಷಕ್ಕೆ ೫ ಮುಖ್ಯಮಂತ್ರಿಗಳು ಆಗಿದ್ದರೆ ಮಧ್ಯ ಪ್ರದೇಶದಲ್ಲಿ ೫ ಮುಖ್ಯಮಂತ್ರಿಗಳು, ಉತ್ತರ ಪ್ರದೇಶದಲ್ಲಿ ೩ಮುಖ್ಯಮಂತ್ರಿಗಳು, ರಾಜಾಸ್ಥಾನದಲ್ಲಿ ೫ ಮುಖ್ಯಮಂತ್ರಿಗಳು, ಬಿಹಾರಿನಲ್ಲಿ ೬ ಮುಖ್ಯಮಂತ್ರಿಗಳು ಗುಜರಾತ್‌ನಲ್ಲಿ ೩ ಮುಖ್ಯಮಂತ್ರಿಗಳು ಆಗಿಹೋದರು. ಕರ್ನಾಟಕ, ಕಾಶ್ಮೀರ, ಆಂಧ್ರಪ್ರದೇಶ್, ಪಂಜಾಬ್, ತಮಿಳುನಾಡು ಮತ್ತು ಇನ್ನಿತರ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಸರ್ಕಾರವನ್ನು ಕಾಂಗ್ರೆ ಉರುಳಿಸಿತು. ನೀತಿಗೆ, ಕಾಯ್ದೆಗೆ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿ ಹಾಗೆಯೇ ಅನೇಕ ರಾಜ್ಯಪಾಲರ ಬೇಕಾಬಿಟ್ಟಿ ವರ್ಗಾವಣೆ ಮತ್ತು ವಜಾ ಮಾಡಿರುವುದು ರಾಜಕೀಯ ಮೌಲ್ಯಗಳಿಗೆ ಮತ್ತು ಸಂವಿಧಾನದ ನೀತಿಗೆ ಕೊಡಲಿ ಏಟು ಕೊಟ್ಟಿತು. ರಾಜೀವ್ ಗಾಂಧಿಯವರ ೫ ವರ್ಷದ ಅವಧಿಯಲ್ಲಿ ಕೇಂದ್ರ ಸಂಪುಟದಲ್ಲಿ ಮಹತ್ವ ಖಾತೆಯ ಒಬ್ಬ ಮಂತ್ರಿಯನ್ನೂ 1–1½ ವರ್ಷಕ್ಕಿಂತ ಹೆಚ್ಚು ಸ್ಥಾನದಲ್ಲಿ ಉಳಿಸಲಿಲ್ಲ. ಇದೇ ಕಾಂಗ್ರೆನ ಭದ್ರತೆ–ಸ್ಥಿರತೆ.

ಕೇವಲ 2½ ವರ್ಷಗಳ ಅವಧಿ ಬಿಟ್ಟರೆ ಸ್ವಾತಂತ್ರ್ಯ ಬಂದಂದಿನಿಂದ ದೇಶವನ್ನು ಸತತವಾಗಿ ಆಳಿರುವ ಕಾಂಗ್ರೆಸ್ ಸರ್ಕಾರದಿಂದ ದೇಶಕ್ಕೆ ದೊರೆತ ಫಲ ಏನು? ೧೩ ಕೋಟಿ ಯುವ ನಿರುದ್ಯೋಗಿಗಳು, ಶೇ 50ಕ್ಕೂ ಹೆಚ್ಚು ಅನಕ್ಷರಸ್ಥರು ಮತ್ತು ಕಡು ಬಡವರು, ಕುಡಿಯುವ ನೀರಿಲ್ಲದೆ ದಾಹದಿಂದ ತತ್ತರಿಸುವ ೨ಲಕ್ಷ ಹಳ್ಳಿಗಳ

೧,೫೦,೦೦೦ ಕೋಟಿ ಮೊತ್ತದ ದೇಶ–ವಿದೇಶ ಸಾಲದ ಹೊರೆ, ಕೇವಲ ೧೦ ವರ್ಷದ ಅವಧಿಯಲ್ಲಿ ಶೇ. ೩೦೦ ರಿಂದ ೪೦೦ ಪಟ್ಟು ಬೆಲೆ ಏರಿಕೆ. ಇದಕ್ಕೆ ಬೇರೆ ಯಾರು ಜವಾಬ್ದಾರರು? ಈ ಭದ್ರತೆ ನಿಮಗೆ ಬೇಕೇ? ಪುನಃ ನೀವು ಇದನ್ನೇ ಬಯಸುತ್ತೀರಾ?

ಕ್ಷುಲ್ಲಕ ರಾಜಕೀಯವನ್ನು ನಡೆಸಿ ಅಧಿಕಾರವೇ ಸರ್ವಸ್ವ–ಹಿತದಲ್ಲೇ ನಿರತರಾಗಿರುವವರ ಬದಲಾಗಿ ಸಮಗ್ರ ರಾಷ್ಟ್ರದ ಐಕ್ಯ ಮತ್ತು ಪ್ರಗತಿಗಾಗಿ ಪ್ರಾಮಾಣಿಕತೆಯಿಂದ ದುಡಿಯುವ ಸರ್ಕಾರ ನಿಮಗೆ ಬೇಡವೇ? ಜನತಾ ದಳ ಮತ್ತು ರಾಷ್ಟ್ರೀಯ ರಂಗ ಅಧಿಕಾರದಲ್ಲಿದ್ದಾಗ ಕೊಟ್ಟ ಮಾತಿನಂತೆ ಕೈಗೊಂಡ ಎಲ್ಲ ಪ್ರಗತಿಪರ ಯೋಜನೆಗಳನ್ನು ಮೊಳಕೆಯಲ್ಲೇ ಕಾಂಗ್ರೆ ಚಿವುಟಿ ಹಾಕಿತು.

ಆ ಯೋಜನೆಗಳನ್ನು ಪುನಃ ಅನುಷ್ಠಾನಕ್ಕೆ ತರುವ ಶಕ್ತಿ ನಿಮ್ಮಲ್ಲಿದೆ, ದಕ್ಷ ಪ್ರಾಮಾಣಿಕ ಸರ್ಕಾರವನ್ನು ರಚಿಸುವ ಅವಕಾಶ ಪುನಃ ಬಂದಿದೆ. ಅದು ನಿಮ್ಮ ವಿವೇಚನೆಯನ್ನು ಅವಲಂಬಿಸಿದೆ. ಕೌಟುಂಬಿಕ ಸರ್ಕಾರದ ಬದಲು ಜನತೆಯ ಸರ್ಕಾರ ರಚಿಸಿ.★

೯ ನೇ ಪುಟದಿಂದ......... ರಾಜ್ಯ ವ್ಯವಸ್ಥೆಯಲ್ಲಿ ಪರಿವರ್ತನೆ

ಹೋರಾಡುವ ರಾಜಕಾರಣಿಗಳಿದ್ದಾರೆಯೆ ? ಪ್ರಚಲಿತ ವ್ಯವಸ್ಥೆಯ ಬದಲಾವಣೆಗೆ ಯಾರೂ ಸಿದ್ಧರಿಲ್ಲ. ಇರುವ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಹೋಗುವ ಚಪಲ. ಅದಕ್ಕಾಗಿ ಅಧಿಕಾರದ ವ್ಯಾಮೋಹ. ಸ್ಥಾನ ಗಿಟ್ಟಿಸಿಕೊಳ್ಳುವ ತವಕ.

ಈಗ ಜನ ಯೋಚಿಸಬೇಕು. ಸೋತುಕೂತಿರುವ ಈ ರಾಜಕೀಯ ಪಕ್ಷಗಳ ವಿಷಯದಲ್ಲಿ ವಿಶ್ವಾಸವಿಡಬೇಕೆ–ಬೇಡವೆ ? ಇದನ್ನು ನಿರ್ಧರಿಸುವ ಕಾಲ ಈಗ ಸನ್ನಿಹಿತವಾಗಿದೆ. ಜನರೇ ಈಗ ಮುಂದಾಗಬೇಕು. ಗ್ರಾಮ ಮಟ್ಟದಿಂದ ತಾಲ್ಲೂಕು ಮಟ್ಟದವರೆಗೆ ಮತದಾರರ ಸಂಘಟನೆಯಾಗಬೇಕು. ಪಕ್ಷರಾಜಕಾರಣಿಗಳಿಗೆ ಇಲ್ಲಿ ಅವಕಾಶವಿರಕೂಡದು. ಮುಂದೆ ಜಿಲ್ಲಾ ಮಟ್ಟದಲ್ಲೂ ಇಂತಹ ಸಂಘಟನೆಗಳು ಬೆಳೆಯಲಿ. ಚುನಾವಣೆಯ ಸಂದರ್ಭದಲ್ಲಿ ತಾಲ್ಲೂಕು ಮಟ್ಟದ ಹಾಗೂ ಜಿಲ್ಲಾ ಮಟ್ಟದ ಮತದಾರರ ಸಂಘಟನೆ ತನ್ನ ಅಭ್ಯರ್ಥಿಗಳನ್ನು ಚುನಾವಣೆಗಾಗಿ ನಿಲ್ಲಿಸುವಂತಾಗಲಿ. ಇವರು ಪಕ್ಷದ ಅಭ್ಯರ್ಥಿಗಳಲ್ಲ. ಜನತಾ ಅಭ್ಯರ್ಥಿಗಳು. ಇದಕ್ಕಾಗಿ ಲೋಕಶಿಕ್ಷಣ ಕಾರ್ಯ ವ್ಯಾಪಕವಾಗಿ ನಡೆಯಬೇಕು. ಇದು ಸುಲಭದ ಕಾರ್ಯವಲ್ಲ. ಆದರೂ ಜನತೆ ಮನಸ್ಸು ಮಾಡಿದರೆ ಅಸಾಧ್ಯವೇನಲ್ಲ. ನಮ್ಮ ರಾಜ್ಯ ವ್ಯವಸ್ಥೆ ಮತ್ತು ಅರ್ಥವ್ಯವಸ್ಥೆ ಎರಡರಲ್ಲೂ ವಿಕೇಂದ್ರೀಕರಣವಾಗಬೇಕು ಎಂದಿದ್ದರು ಗಾಂಧೀಜಿ.★

ಚುನಾವಣೆ : ಬಿ.ಜೆ.ಪಿ. ಯ ದೃಷ್ಟಿಯಲ್ಲಿ

—ಡಾ. ಮುರಳಿ ಮನೋಹರ್ ಜೋಶಿ

ಇಂದು ಪ್ರತಿಯೊಬ್ಬ ಭಾರತೀಯನಿಗೂ ಪುರುಷ, ಸ್ತ್ರೀ, ಮಗು—ತಲಾ ರೂ. ೪೦೦೦ ಕ್ಕೂ ಹೆಚ್ಚು ಸಾಲ ಇದೆ. ಹಿಂದೆ ಬಂದಂತಹ ಸರ್ಕಾರಗಳೆಲ್ಲಾ ಮನ ಬಂದಂತೆ ಸಾಲ ಮಾಡಿದುದೇ ಅದಕ್ಕೆ ಕಾರಣ. ಇಂದು ಭಾರತದ ಆರ್ಥಿಕ ಬೆಳವಣಿಗೆಯು ಅದರ ವಾಸ್ತವಿಕತೆಗಳಿಗೆ ಏನೇನೂ ಸರಿ ಹೊಂದಿಕೆಯಾಗಿ ಇಲ್ಲದಿರುವುದರಿಂದ ಭಾರತೀಯ ರೈತ ಎಷ್ಟೇ ಕಷ್ಟಪಟ್ಟು ದುಡಿದರೂ ಅವನಿಗೆ ಜೀವನದ ಅತ್ಯಾವಶ್ಯಕತೆಗಳೂ ಕೂಡಾ ಸಿಗುತ್ತಿಲ್ಲ.

ರೂಪಾಯಿಯ ಮೌಲ್ಯ ಅಪಾಯಕರ ರೀತಿಯಲ್ಲಿ ಕೆಳಗೆ ಜಾರುತ್ತಲೇ ಬಂದಿದೆ. ೧೯೪೭ಕ್ಕೆ ಹೋಲಿಸಿದರೆ ಈಗ ರೂಪಾಯಿಯ ಮೌಲ್ಯ ಸುಮಾರು ಹತ್ತು ಪೈಸೆ ಅಷ್ಟೇ. ಯಾವ ಸ್ಥಾನದಲ್ಲಿರುವ ಭಾರತೀಯನೂ ಕೂಡಾ ಹೆಚ್ಚು ಗುಣಮಟ್ಟದ ಜೀವನವನ್ನು ಬಯಸುವುದು ವ್ಯರ್ಥವಾಗಿದೆ. ಹೀಗಾಗಲು ಆಡಳಿತ ನಡೆಸುತ್ತಿದ್ದವರ ಭ್ರಷ್ಟಾಚಾರದಷ್ಟೇ ಅವರ ಸಾಮರ್ಥ್ಯಹೀನತೆಯೂ ಕಾರಣ. ತಮಗೆ ಬೇಕಾದವರನ್ನು ದೇಶದ ಉಳಿದ ಜನರಿಗಿಂತ ಮತ್ತು ದೇಶದ ಗ್ರಾಮಗಳಿಗಿಂತ ಹೆಚ್ಚು ಮುಖ್ಯವೆಂದು ಪರಿಗಣಿಸಿದ ಕಳೆದ ೪೦ ವರ್ಷಗಳ ಸಂಸ್ಕೃತಿಯಿಂದ ಭಾರತವನ್ನು ಬಿಡುಗಡೆಗೊಳಿಸಬೇಕಾದ ಸಮಯವೀಗ ಬಂದಿದೆ.

ನಮಗೆ ಬೇಕಾಗಿರುವುದು ಒಂದು ಪೂರ್ತಿಯಾಗಿ ಹೊಸ ಆರ್ಥಿಕ ಮತ್ತು ರಾಜಕೀಯ ಸಂಸ್ಕೃತಿ. ಅದು ಭಾರತೀಯ ಜನತಾ ಪಕ್ಷಕ್ಕೆ ಮಾತ್ರ ತರಲು ಸಾಧ್ಯವಿರುವಂತಹ ಸಂಸ್ಕೃತಿ. ಬಿ.ಜೆ.ಪಿ.ಯು ಅರ್ಥವ್ಯವಸ್ಥೆಯನ್ನು ಅಧಿಕಾರಿ ವರ್ಗದ ಬಿಗಿಹಿಡಿತದಿಂದ ಬಿಡುಗಡೆ ಮಾಡಿ ವ್ಯಕ್ತಿಯ ಪ್ರಯತ್ನಗಳೇ ಉತ್ಪಾದನೀಯ ಶಕ್ತಿಯನ್ನಾಗಿ ಮಾಡುವುದು. ಬಿ.ಜೆ.ಪಿ.ಯು ಈಗಿನ ರೇಶನ್ ವ್ಯವಸ್ಥೆಯನ್ನು ಬದಲಾಯಿಸಿ ದಿನಗೂಲಿಯ ಜನರೂ ಅದರ ಪ್ರಯೋಜನ ಪಡೆಯುವಂತೆ ಮಾಡುವುದಲ್ಲದೆ, ದಿನಗೂಲಿ ಜನರಿಗೆ ಬೇಕಾದ ಇನ್ನೂ ಕೆಲವು ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸೇರಿಸುವುದು.

ಚಿಲ್ಲರೆ ಮಾರಾಟದ ಬೆಲೆಗಳು ಉತ್ಪಾದನೆಯ ವೆಚ್ಚಗಳಿಗೆ ಸರಿಹೊಂದಿಕೆಯಾಗುವಂತೆ ಮಾಡಲು ಮತ್ತು ವಸ್ತುಗಳು ನಿರ್ದಿಷ್ಟವಾದ ಗುಣಮಟ್ಟದಲ್ಲಿರುವಂತೆ ಮಾಡಲು ಬಿಜೆಪಿಯು ಬಳಕೆದಾರರ ನ್ಯಾಯಾಲಯಗಳನ್ನು ಬಲಪಡಿಸುವುದು. ಬಿಜೆಪಿಯು ಆದಾಯ ತೆರಿಗೆಯ ಮಿತಿಯನ್ನು ರೂ. ೪೮,೦೦೦ ಕ್ಕೆ ಹೆಚ್ಚಿಸುವುದು ಮತ್ತು

ಅದನ್ನು ಜೀವನ ವೆಚ್ಚದ ಸೂಚಿಗೆ ಸಂಬಂಧಿಸಿ ಇರುವಂತೆ ಮಾಡುವುದು ಅಲ್ಲದೆ, ಕನಿಷ್ಟ ಜೀವನ ಮಟ್ಟವನ್ನು ಪಡೆಯುವುದಕ್ಕಾಗಿ ಕುಟುಂಬದಲ್ಲಿರುವ ಆಶ್ರಿತರ ಸಂಖ್ಯೆಗೆ ಅನುಗುಣವಾಗಿ ತೆರಿಗೆಯು ತತ್ಸಮಾನ ಪ್ರಮಾಣದ ಇಳಿತಾಯಗಳನ್ನು ಮಾಡುವಂತೆ ಮಾಡುವುದು. ಬಿಜೆಪಿಯು ಹಣವು ಯಾವ ಮೂಲಗಳಿಂದ ಬರುವುದೆಂಬುದನ್ನು ಪರಿಗಣಿಸದೆ ಗ್ರಾಮೀಣ ಕೈಗಾರಿಕೆಗಳಲ್ಲಿ ಹಣ ಹೂಡಿ ಗ್ರಾಮೀಣ ಅಭಿವೃದ್ಧಿಯು ಅತ್ಯಂತ ವೇಗದಿಂದ ಆಗುವಂತೆ ಮಾಡುವುದು. ಹಣದುಬ್ಬರವನ್ನು ತಡೆಯುವುದಕ್ಕಾಗಿ ಬಿ.ಜೆ.ಪಿಯು ಕೊರತೆ ರಹಿತವಾದ ರೆವಿನ್ಯೂ ಬಜೆಟ್ ಇರುವಂತೆ ಮತ್ತು ಬಹು ಜನರು ಬಳಕೆ ಮಾಡುವ ವಸ್ತುಗಳ ಮೇಲೆ ಮುಂದಿನ ಐದು ವರ್ಷಗಳ ಕಾಲ ಎಕ್ಸೈಸ್ ಸುಂಕವನ್ನು ವಿಧಿಸದಂತೆ ನೋಡಿಕೊಳ್ಳುವುದಲ್ಲದೆ, ಹಿಂಜರಿತ ಪ್ರವೃತ್ತಿಯ ಅಂತರರಾಜ್ಯಗಳ ಸ್ಥಳೀಯ ಕರಗಳನ್ನು ತೆಗೆದು ಹಾಕುವುದು.

ಬಿಜೆಪಿಯು ಹೆಚ್ಚುವರಿ ನೆಲವನ್ನು ಉಳುವವರಿಗೆ ವಿತರಣೆ ಮಾಡುವುದು ಮತ್ತು ಪರಂಪರಾಗತ ಕಲಾನೈಪುಣ್ಯಗಳನ್ನು ಪೋಷಿಸುವುದಕ್ಕಾಗಿ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವದಕ್ಕಾಗಿ ಮತ್ತು ನಮ್ಮ ವಿದೇಶಿ ವಿನಿಮಯ ಆವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಒಂದು ರಾಷ್ಟ್ರೀಯ ಕರಕುಶಲ ಕಲಾ ನಿಪುಣರ ಅಭಿವೃದ್ಧಿ ಬ್ಯಾಂಕನ್ನು ಸ್ಥಾಪಿಸುವುದು— ಬಿಜೆಪಿಯು ರೈತರಿಗೆ ಅವರ ಸಹಜ ಹಕ್ಕಾಗಿರುವ ಸುಲಭವಾದ ನೀರಾವರಿ ಮತ್ತು ನೀರಿನ ಸೌಲಭ್ಯಗಳನ್ನು ಒದಗಿಸಿ ಕೃಷಿ ಸಾಲಗಳು ಕಡಿಮೆಯಾಗುವಂತೆ ಮಾಡುವುದು. ಬಿಜೆಪಿಯು ಹಳ್ಳಿಗಳ ಸಮಗ್ರ ಅಭಿವೃದ್ಧಿಗಾಗಿ ಹತ್ತು ಕಿಲೋಮೀಟರ್‌ಗಳ ವ್ಯಾಪ್ತಿಯ ಒಳಗೆ ಉದ್ಯೋಗಗಳನ್ನು ಒದಗಿಸುವದಲ್ಲದೆ, ಹಳ್ಳಿಗಳಿಂದ ವಲಸೆ ಹೋಗುವುದನ್ನು ತಡೆಯುವುದಕ್ಕಾಗಿ ಗ್ರಾಮೀಣ ಜನರಿಗೆ ಮನೆ, ಶಿಕ್ಷಣ, ಆರೋಗ್ಯ ಮತ್ತು ಮನೋರಂಜನೆ ಸೌಲಭ್ಯಗಳನ್ನು ಒದಗಿಸುವುದು. ಒಟ್ಟಿನಲ್ಲಿ ಬಿಜೆಪಿಯು ಜನರಿಗಾಗಿ, ಜನರ ಮತ್ತು ಜನರಿಂದ ನಿರ್ವಹಿಸುವಂತಹ ಒಂದು ಪ್ರಜಾಪ್ರಭುತ್ವವಾದಿ ಅರ್ಥವ್ಯವಸ್ಥೆಯನ್ನು ರೂಪಿಸುವುದು. ಬಿಜೆಪಿಯನ್ನು ನಂಬಬಹುದೆಂದು ನಿಮಗೆ ಗೊತ್ತು. ಏಕೆಂದರೆ, ಇತರರಲ್ಲಿ ಇಲ್ಲದುದು ಬಿಜೆಪಿಯಲ್ಲಿದೆ. ಅವುಗಳನ್ನೆಲ್ಲಾ ಮಾಡಲು – ಚೆನ್ನಾಗಿ ಮಾಡಲು, ಬಿಜೆಪಿಯಲ್ಲಿ ಉನ್ನತ ಮಟ್ಟದ ಪ್ರಾಮಾಣಿಕತೆ, ಸ್ಪಷ್ಟ ವಿಚಾರ, ಆಂತರಿಕ ಶಿಸ್ತು ಮತ್ತು ಸ್ಥಿರತೆ, ಪಕ್ವವಾದ ನಾಯಕತ್ವಗಳು ಇವೆ; ಸಮರ್ಪಣ ಭಾವದ ಸದಸ್ಯರಿದ್ದಾರೆ. ಅದರ ಬಗ್ಗೆ ಯೋಚಿಸಿ ನೋಡಿರಿ. ಉಳಿದವುಗಳನ್ನೆಲ್ಲಾ ನೀವು ಪರೀಕ್ಷಿಸಿ ನೋಡಿದ್ದೀರಿ ಮತ್ತು ಅದಕ್ಕೆ ಬೆಲೆಯನ್ನೂ ಕೊಟ್ಟಿದ್ದೀರಿ. ಜನತೆಯ ಉದ್ಧಾರಕ್ಕಾಗಿ ಮತ್ತು ದೇಶದ ಏಳಿಗೆಗಾಗಿ ಈ ಬಾರಿ ನಿಮ್ಮ ಬೆಂಬಲಕ್ಕೆ ಬಿಜೆಪಿಯೇ ಸೂಕ್ತ–ಭಾರತದ ಶಕ್ತಿ ಸಂಪನ್ನತೆಗಾಗಿ, ಸ್ಥಿರತೆಗಾಗಿ ಮತ್ತು ಅಖಂಡತೆಗಾಗಿ.

ಚುನಾವಣೆ : ರೈತ ಸಂಘದ ದೃಷ್ಟಿಯಲ್ಲಿ

—ಎಚ್. ಎಸ್. ರುದ್ರಪ್ಪ

ಮುಂದಿನ ಚುನಾವಣೆಯಲ್ಲಿ ಯಾವ ರಾಜಕೀಯ ಪಕ್ಷಕ್ಕೂ ಸ್ಪಷ್ಟ ಬಹುಮತ ದೊರೆಯುವುದಿಲ್ಲ. ಸಮ್ಮಿಶ್ರ ಸರ್ಕಾರ ಬಹಳ ದಿನ ಉಳಿಯುವುದಿಲ್ಲ. ಆದ್ದರಿಂದ ರಾಷ್ಟ್ರೀಯ ಸರ್ಕಾರ ರಚಿಸಬೇಕು.

ಒಂದು ಪಕ್ಷ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ಬಂದರೂ ಅದು ಹೇಳಿಕೊಳ್ಳುವಂತೆ ಅದರಿಂದ ಸುಭದ್ರ ಸರ್ಕಾರ ಕೊಡಲು ಸಾಧ್ಯವಿಲ್ಲ. ಸುಭದ್ರ ಸರ್ಕಾರದ ಮುಖ್ಯ ಲಕ್ಷಣ ಹಾಗೂ ಕರ್ತವ್ಯ ಸಮಾಜದಲ್ಲಿ ಹಾಗೂ ಜನರಲ್ಲಿ ನೆಮ್ಮದಿ ಮೂಡಿಸುವುದು. ೪೦ ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಇದು ಜನರಿಗೆ ದೊರೆತಿದೆಯೇ? ಪೊಲೀಸರ ಮುಖಾಂತರ ಜನರ ಬಾಯಿ ಮುಚ್ಚಿಸುವುದು ಸುಭದ್ರ-ಸರ್ಕಾರ ಅನ್ನುತ್ತೀರಾ? ಬಹು ಸಂಖ್ಯಾತ ಜನ ಅವಲಂಬಿಸಿರುವ ಕೃಷಿ, ವಾಸಿಸುವ ಹಳ್ಳಿಗಳ ಅಭಿವೃದ್ಧಿಗೆ, ಕೃಷಿ ಉತ್ಪನ್ನಗಳಿಗೆ, ವೈಜ್ಞಾನಿಕವಾದ ಲಾಭದಾಯಕವಾದ ಬೆಲೆ ದೊರಕಿಸಿ ಕೊಡುವಲ್ಲಿ ಎಲ್ಲಾ ರಾಜಕೀಯ ಪಕ್ಷಗಳು-ಸರ್ಕಾರಗಳು ವಿಫಲವಾಗಿವೆ. ಆದ್ದರಿಂದ ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ದೊರಕಿಸಿಕೊಳ್ಳುವುದರ ಜೊತೆಗೆ ಬಳಕೆದಾರನ ಶೋಷಣೆ ಆಗುವುದನ್ನು ತಪ್ಪಿಸುವುದಕ್ಕೋಸ್ಕರ ರೈತ ಸಂಘ ಹೋರಾಟವನ್ನು ಪ್ರಾರಂಭಿಸಿತು. ರೈತ ಸಂಘವನ್ನು ದಮನ ಮಾಡಲು ಪ್ರಯತ್ನಿಸಿದ ಕಾಂಗ್ರೆಸ್ಸನ್ನೂ ೧೯೮೩ ರಲ್ಲಿ ರಾಜ್ಯದಲ್ಲಿ ಸೋಲಿಸಲು ಪ್ರಮುಖ ಪಾತ್ರವಹಿಸಿತು. ನಂತರ ಬಂದ ಸರ್ಕಾರ ರೈತರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಬಗೆಹರಿಸಲು ಪ್ರಯತ್ನಿಸಲಿಲ್ಲ. ಹಾಗಾಗಿ ನಾವೇ ಚುನಾವಣೆಗೆ ಅನಿವಾರ್ಯವಾಗಿ ಇಳಿಯಬೇಕಾಯಿತು. ಈಗಿನ ಚುನಾವಣೆಯಲ್ಲಿ ಎಲ್ಲ ಪಕ್ಷಗಳ ವಿರುದ್ಧ ಹೋರಾಡುತ್ತಿದ್ದೇವೆ.

ಉತ್ಪಾದಕರ ಮತ್ತು ಗ್ರಾಹಕರ ಶೋಷಣೆ ವಿರುದ್ಧವೇ ನಮ್ಮ ರೈತ ಸಂಘದ ಹೋರಾಟ. ಕೇಂದ್ರದಲ್ಲಿ ಸಮರ್ಪಕವಾದ ಆರ್ಥಿಕ ನೀತಿ ಜಾರಿಗೊಳಿಸುವುದರಿಂದ ಮಾತ್ರ ಉತ್ಪಾದಕರ ಮತ್ತು ಗ್ರಾಹಕರ ಶೋಷಣೆಗಳನ್ನು ನಿಲ್ಲಿಸಲು ಸಾಧ್ಯ. ಆದ್ದರಿಂದ ಲೋಕಸಭೆಯಲ್ಲಿ ಇದರ ಬಗ್ಗೆ ಗಮನ ಸೆಳೆದು ಇತರ ಪಕ್ಷಗಳ ಸದಸ್ಯರ ಬೆಂಬಲ ಪಡೆದು ಸಮಸ್ಯೆ ಪರಿಹರಿಸಿಕೊಳ್ಳುವ ಉದ್ದೇಶದಿಂದ ಈಗಿನ

ಲೋಕಸಭಾ ಚುನಾವಣೆಗೆ ರೈತ ಸಂಘ ಸ್ಪರ್ಧಿಸಿದೆ.

ಸಂಘ ಸ್ಪರ್ಧಿಸಿರುವ ೧೧ ಕ್ಷೇತ್ರಗಳಲ್ಲಿ ಕನಿಷ್ಠ ಮಂಡ್ಯ, ಬೆಳಗಾವಿ, ಧಾರವಾಡ ಉತ್ತರ ಮತ್ತು ಬಾಗಲಕೋಟೆಗಳಲ್ಲಿ ಜಯಗಳಿಸುವ ವಿಶ್ವಾಸವಿದೆ. ಉಳಿದ ಕ್ಷೇತ್ರಗಳಲ್ಲೂ ತೀವ್ರ ಪೈಪೋಟಿ ಕೊಡುತ್ತೇವೆ. ನಮ್ಮ ಸಂಘದ ಸಂಘಟನೆ ಈಗ ಸ್ಪರ್ಧಿಸಿರುವ ೧೧ ಕ್ಷೇತ್ರಗಳಲ್ಲೂ ಚೆನ್ನಾಗಿದೆ. ಅಲ್ಲಿ ಸ್ಪರ್ಧಿಸಬೇಕೆಂದು ಕಾರ್ಯಕರ್ತರು ಮತ್ತು ಜನತೆ ಅಪೇಕ್ಷೆ ವ್ಯಕ್ತಪಡಿಸಿದರು. ಅವರ ಇಚ್ಛೆ ಈಡೇರಿಸದಿದ್ದರೆ ನಮ್ಮ ಕಾರ್ಯಕರ್ತರು ಅತಂತ್ರರಾಗಿ ಬೇರೆ ಬೇರೆ ಪಕ್ಷಗಳತ್ತ ತಿರುಗುತ್ತಿದ್ದರು. ಆದ್ದರಿಂದ ನಮ್ಮ ಸಂಘಟನೆಯನ್ನು ಕಾಯ್ದುಕೊಳ್ಳಬೇಕಾಗಿದೆ.

ಎಲ್ಲಾ ರಾಜಕೀಯ ಪಕ್ಷಗಳು ಜಾತಿಯ ಆಧಾರದ ಮೇಲೆ ಟಿಕೇಟ್ ಕೊಡುತ್ತಿರುವುದರಿಂದ ರೈತ ಸಂಘದ ಕಾರ್ಯಕರ್ತರು ಜಾತಿ ಸಂಕೋಲೆಯಲ್ಲಿ ಸಿಕ್ಕಿ ಹಾಕಿಕೊಂಡಿಲ್ಲವೆಂಬುದನ್ನು ಒರೆಗೆ ಹಚ್ಚಲು ಈಗಿನ ಚುನಾವಣೆ ನಮಗೆ ಅವಕಾಶ ಮಾಡಿಕೊಡುತ್ತದೆ. ಸಾರ್ವತ್ರಿಕ ಹಾಗೂ ರಾಜಕೀಯ ಜೀವನದಲ್ಲಿ ಹಾಸುಹೊಕ್ಕಾಗಿರುವ ಭ್ರಷ್ಟಾಚಾರವನ್ನು ಕಿತ್ತೊಗೆಯದಿದ್ದರೆ ಈ ದೇಶಕ್ಕೆ ಉಳಿಗಾಲ ಹಾಗೂ ಭವಿಷ್ಯವಿಲ್ಲ. ಆದ್ದರಿಂದ ರಾಜಕಾರಣಿಗಳ ಭ್ರಷ್ಟಾಚಾರ ಪತ್ತೆ ಹಚ್ಚಲು ಒಂದು ಸ್ವಾಯತ್ತ ಆಯೋಗ ರಚಿಸಲು ಹಾಗೂ ಭ್ರಷ್ಟಾಚಾರವೆಸಗಿ ಅಪಾರ ಹಣ ಮಾಡಿಕೊಂಡ ರಾಜಕಾರಣಿಗಳು ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸದಂತೆ ತಡೆಯಲು ಸಂವಿಧಾನಕ್ಕೆ ತಿದ್ದುಪಡಿತರಬೇಕು. ಜೊತೆಗೆ ರಾಜಕಾರಣಿಗಳ ನಿವೃತ್ತ ವಯಸ್ಸು ನಿಗದಿ ಪಡಿಸಬೇಕು. ಜಾತಿ ಆಧಾರದ ಮೇಲೆ ಮೀಸಲಾತಿ ಸಲ್ಲ. ಆರ್ಥಿಕ ಸ್ಥಿತಿ ಆಧರದ ಮೇಲೆ ಮೀಸಲಾತಿ ಇರಬೇಕು. ಮಂದಿರ–ಮಸೀದಿ ಸಮಸ್ಯೆ ರಾಷ್ಟ್ರೀಯ ಸಮಸ್ಯೆಯೇ ಅಲ್ಲ. ದೇಶದ ಜನರಿಗೆ ಅನ್ನ–ಬಟ್ಟೆ ಕೊಡುವುದೇ ದೊಡ್ಡ ಸಮಸ್ಯೆ. ಆದರೆ ಇದರ ಬಗ್ಗೆ ಯಾವುದೇ ಪಕ್ಷ ನಿರ್ದಿಷ್ಟವಾದ ನೀತಿ ನಿರೂಪಿಸಿಲ್ಲ ರಾಜ್ಯ ಸರ್ಕಾರದ ಆಡಳಿತ ಸರಿಯಿಲ್ಲ. ಕಳೆದ ೧೫ ತಿಂಗಳಿಂದ ಪೂರ್ಣ ಪ್ರಮಾಣದ ಸಚಿವ ಸಂಪುಟ ರಚಿಸಲಾಗದ ಈ ಸರ್ಕಾರ ಕೇಂದ್ರದ ರೈತರ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತಂದು ೧೫೭ ಕೋಟಿ ರೂ. ಪರಿಹಾರ ಕೊಡಲು ತಯಾರಾಗಿಲ್ಲ. ಆದರೆ ಕೈಗಾರಿಕೆಗಳು ಅನುಭವಿಸುತ್ತಿರುವ ೨೦೦ ಕೋಟಿ ರೂ. ನಷ್ಟ ತುಂಬಿ ಕೊಡಲು ತಯಾರಿದೆ ಎಂದರೆ ಇದಕ್ಕೆ ರೈತರ ಬಗ್ಗೆ ಕಾಳಜಿ ಇದೆ ಎಂದು ಹೇಳುತ್ತೀರಾ? ಕಾಂಗ್ರೆಸ್, ಜನತಾದಳ, ಎಸ್.ಜೆ.ಪಿ.ಹಾಗೂ ಬಿ. ಜೆ. ಪಿ. ವಿರುದ್ಧ ರೈತಸಂಘ ಹೋರಾಡುತ್ತದೆಯೇ ಹೊರತು ಯಾವುದೇ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ★

ಚುನಾವಣೆ : ದಲಿತ ಸಂಘರ್ಷ ಸಮಿತಿಯ ದೃಷ್ಟಿಯಲ್ಲಿ

—ಪ್ರೊ. ಬಿ. ಕೃಷ್ಣಪ್ಪ

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚಳವಳಿ–ಹೋರಾಟಗಳಿಂದ 'ಕ್ರಾಂತಿ' ಮಾಡುವುದು ಸಾಧ್ಯವಿಲ್ಲ. ರಾಜಕೀಯ ಅಧಿಕಾರವಿದ್ದರೆ ಮಾತ್ರ ವ್ಯವಸ್ಥೆಯ ಬದಲಾವಣೆ ಸಾಧ್ಯ. ಕಳೆದ ೪೩ ವರ್ಷಗಳಲ್ಲಿ ಹಲವಾರು "ದಲಿತ ಮುಖಂಡರು" ಅಧಿಕಾರದ ಗದ್ದುಗೆಯನ್ನು ಏರಿದ್ದಾರೆ. ಆದರೂ ದಲಿತರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳಲ್ಲಿ ನಿರೀಕ್ಷಿಸಿದಷ್ಟು ಬದಲಾವಣೆಯಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಪ್ರಜ್ಞಾವಂತ–ಪ್ರಗತಿಪರ ದಲಿತರು ಅಧಿಕಾರಕ್ಕೆ ಬಾರದೇ ಇರುವುದು. ಈ ಹಿನ್ನೆಲೆಯಲ್ಲೇ ದಲಿತ ಸಂಘರ್ಷ ಸಮಿತಿ ಈ ಸಾರಿ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ನಿರ್ಧರಿಸಿತು. ದಲಿತ ಸಂಘರ್ಷ ಸಮಿತಿ ಚುನಾವಣೆ ರಾಜಕೀಯ ಪ್ರವೇಶಿಸಿದ್ದು "ದಿಢೀರ್ ನಿರ್ಧಾರ"ವಲ್ಲ. ೧೯೮೫ ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲೇ ದಲಿತ ಸಂಘರ್ಷ ಸಮಿತಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಿತು. ಆಗಿನ ಚುನಾವಣೆಯಲ್ಲಿ ಜನತಾ ಪಕ್ಷಕ್ಕೆ ಬೆಂಬಲ ನೀಡಿದವು. ೧೯೮೯ ರ ಲೋಕಸಭಾ-ವಿಧಾನಸಭಾ ಚುನಾವಣೆಯಲ್ಲಿ ಜನತಾದಳದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಯತ್ನಿಸಿ ವಿಫಲವಾದ ಸಮಿತಿ, ಕೆಲವು ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿ ಪರಾಭವಗೊಂಡಿತು. ಇದಕ್ಕೆ ಮುಖ್ಯ ಕಾರಣ "ನಾವು" ರಾಷ್ಟ್ರ ರಾಜಕಾರಣದ ಮುಖ್ಯ ವಾಹಿನಿಯಲ್ಲಿ ಸೇರದೆ. ಪ್ರತ್ಯೇಕ ಗುಂಪಾಗಿ ಸ್ಪರ್ಧಿಸಿದ್ದೇ. ಜಾತಿ ವ್ಯವಸ್ಥೆ ಬಲವಾಗಿ ಬೇರೂರಿರುವ ಭಾರತದ ದಲಿತ ಸಂಘರ್ಷ ಸಮಿತಿಯಂಥ ಸಂಘಟನೆಗಳು ಸ್ವತಂತ್ರವಾಗಿ ಚುನಾವಣೆಗೆ ಸ್ಪರ್ಧಿಸಿ ಗೆಲ್ಲಲು ಸಾಧ್ಯವೇ ಇಲ್ಲ. ಆದ್ದರಿಂದಲೇ ನಾವು ಬೇರೆ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಭಾರತದ ರಾಜಕಾರಣವೆಂದರೆ ಹೊಂದಾಣಿಕೆಯೇ ಆಗಿದೆ. ಇದಕ್ಕೆ ಕಮ್ಯೂನಿಸ್ಟ್ ಪಕ್ಷಗಳೂ ಹೊರತಾಗಿಲ್ಲ. ದಲಿತ ಸಂಘರ್ಷ ಸಮಿತಿ ಚುನಾವಣೆ ರಾಜಕೀಯಕ್ಕೆ ಇಳಿದಿರುವುದರಿಂದ ದಲಿತ ಚಳವಳಿಗೆ ಪೆಟ್ಟು ಬೀಳುವುದಿಲ್ಲ. ದಲಿತ ಸಂಘರ್ಷ ಸಮಿತಿ ಇನ್ನು ಮುಂದೆಯೂ ಒಂದು ಸಾಂಸ್ಕೃತಿಕ ಸಂಘಟನೆಯಾಗಿ ಮುಂದುವರೆಯುತ್ತದೆ. ಸಮಿತಿಗೆ ತನ್ನದೇ ಆದ ಒಂದು ರಾಜಕೀಯ ಪಕ್ಷ ಇಲ್ಲದೇ ಇರುವುದರಿಂದ

೨೧ ನೇ ಪುಟ ನೋಡಿ

ಮುಸ್ಲಿಮರ 'ಮತ' ಶಕ್ತಿ

—ಕುಲದೀಪ ನಯ್ಯರ್

ಭವ್ಯವೂ ಸಂಪತ್‌ಸಮೃದ್ಧವೂ ಆಗಿರುವ ಜುಮ್ಮಾ ಮಸೀದಿ ದೆಹಲಿಯ ಮುಸ್ಲಿಮರ ಪೇಲವವಾದ ಬಡ ಬದುಕಿನ ಆವರಣದಲ್ಲಿ ಎತ್ತರಕ್ಕೆ ತಲೆಯೆತ್ತಿ ನಿಂತಿದೆ. ಇದು ಒಂದು ರೀತಿಯಲ್ಲಿ ಭಾರತದ ೧೧ ಕೋಟಿ ಮುಸ್ಲಿಮರ ಸ್ಥಿತಿ ಗತಿಯನ್ನೇ ಹೇಳುತ್ತದೆ. ಅವರ ಮಸೀದಿ-ಮಿನಾರುಗಳು ಗತ ವೈಭವವನ್ನು ಇಂದಿಗೂ ಉಳಿಸಿ ಕೊಂಡು ಮೆರೆಯುತ್ತಿವೆ. ಆದರೆ ಅವರ ಬದುಕು ದೇಶದ ವಿಭಜನೆಯ ನಂತರ ಬಡವಾಗಿದೆ.

ಈ ಮಸೀದಿಯಲ್ಲಿ ಇತ್ತೀಚೆಗೆ ಮುಸ್ಲಿಮರ ಸಮಾವೇಶ ಜರುಗಿತು. ಸಮು ದಾಯದ ಪರಿಸ್ಥಿತಿ ಸುಧಾರಿಸುವುದು ಹೇಗೆ ಎಂಬುದೇ ಚರ್ಚಾವಿಷಯ. ಮಸೀ ದೀಯ ಇಮಾಮ್ ಅಬ್ದುಲ್ಲಾ ಬುಖಾರಿ ಅವರು ಹೇಳುವಂತಹ ರಾಜಕೀಯ ಪಕ್ಷಕ್ಕೆ ಮುಸ್ಲಿಮರೆಲ್ಲರೂ ಒಂದಾಗಿ ಓಟು ಹಾಕಬೇಕು ಎಂದು ಅಲ್ಲಿ ತೀರ್ಮಾನವಾಯಿತು ಎನ್ನಲಾಗಿದೆ. "ಇಮಾಮರ ಆದೇಶ ಪಾಲನೆ ಎಲ್ಲಾ ಮುಸ್ಲಿಮರ ಕರ್ತವ್ಯ"-ಎಂದು ಈ ಸಭೆಯಲ್ಲಿ ತೀರ್ಮಾನವಾಯಿತು.

ಭಾರತದಲ್ಲಿ ಜಾತ್ಯಾತೀತತೆಯ ವೃಕ್ಷದ ಬೇರು ಎಷ್ಟು ಆಳಕ್ಕೆ ಇಳಿದಿದೆ ಎಂದು ಪರಿಶೀಲಿಸಲು ಪ್ರಸಕ್ತ ಚುನಾವಣೆ ಅತ್ಯುತ್ತಮ ಸಂದರ್ಭ ಎನ್ನುವುದು ನಿಸ್ಸಂದೇಹ. ಹಿಂದುಗಳ ಭಾವನೆ ಈಗ ಕೆರಳಿ ನಿಂತಿರುವ ಪ್ರಮಾಣದಲ್ಲಿ ಗಾಂಧೀಜಿ ಕೊಲೆ ಸಂದ ರ್ಭದ ನಂತರ ಹಿಂದೆಂದೂ ಆಗಿರಲಿಲ್ಲ. ಹಿಂದೂ ತೀವ್ರವಾದಿಗಳು ಇದೀಗ ಸಾಧು ಸನ್ಯಾಸಿಗಳನ್ನು ತಮ್ಮ ಉದ್ದೇಶ ಸಾಧನೆಗಾಗಿ ಹೋರಾಟದ ಕಣಕ್ಕೆ ಇಳಿಸಿದ್ದಾರೆ. ಸಾಮಾನ್ಯವಾಗಿ ಚುನಾವಣೆಯಂತಹ ಲೌಕಿಕ ವಿಷಯಗಳಿಗಿಂತ ಈ ಪರಮಾರ್ಥಿಕ ವಿಷಯಗಳಲ್ಲಿ ಆಸಕ್ತರಾಗಿರುವ ಜನರು ಬಹಳ ದೂರವಾಗಿರುವುದರಿಂದಲೇ ಅವರ ಬಗ್ಗೆ ಭಯ-ಗೌರವಗಳಿವೆ. ಅವರ ಬಳಕೆಗೆ ಇದೂ ಒಂದು ಕಾರಣ.

ಆದರೆ ಜುಮ್ಮಾ ಮಸೀದಿಯಲ್ಲಿ ಸಮಾವೇಶ ನಡೆಸಿದ ಮಂದಿ ಮುಸ್ಲಿಮರ ನೈಜ ಪ್ರತಿನಿಧಿಗಳೆಂದೇ ಒಪ್ಪಿಕೊಂಡರೂ ಈ ನಿರ್ಧಾರದಿಂದ ಆ ಸಮುದಾಯಕ್ಕೆ ಪ್ರಯೋಜನವಾದೀತೆ? ಹಿಂದೂ ತೀವ್ರವಾದಿಗಳು ಈ ದೇಶವನ್ನು ಹಿಂದೂ-ಮುಸ್ಲಿಂ ಎಂದು ಒಡೆದುಹಾಕಲು ಉದ್ದೇಶಿಸಿದ್ದಾರೆ. ಮುಸ್ಲಿಮರು ತಮ್ಮ ಸಮಾವೇಶದ ಮೂಲಕ ಹಿಂದೂ ತೀವ್ರವಾದಿಗಳ ಬಲೆಗೆ ಬಿದ್ದಂತೆಯೇ ಆಗಿದೆ. ಈವರೆಗೆ ಈ ದೇಶದ ಸಾಮಾನ್ಯ ಜನರು ಕೋಮುವಾದ, ಆರ್ಥಿಕ ವಿಷಯಗಳೇ ಮೊದಲಾದ

ವುಗಳಲ್ಲಿ ತೀವ್ರಗಾಮಿತ್ವವನ್ನು ಒಪ್ಪಿಕೊಂಡಿರಲಿಲ್ಲ. ಆದ್ದರಿಂದಲೇ ಹಿಂದೂ ತೀವ್ರವಾದಿಗಳ ಉದ್ದೇಶ ಸಫಲವಾಗಿರಲಿಲ್ಲ. ಮುಸ್ಲಿಮರು ಕೇವಲ ಶೇಕಡ ೫ ರಷ್ಟೂ ಇಲ್ಲದ ಕ್ಷೇತ್ರಗಳಿಂದಲೂ ಮತದಾರರು ಮುಸ್ಲಿಂ ಅಭ್ಯರ್ಥಿಯನ್ನು ಚುನಾಯಿಸಿ ಕಳಿಸಿದ ನಿದರ್ಶನಗಳಿವೆ.

ಮುಸ್ಲಿಮ್ ನಾಯಕರು ಈಗ ಮುಸ್ಲಿಮರ ಸಂರಕ್ಷಣೆ, ಸಂಘಟನೆಗಾಗಿ ಮಸೀದಿಯ ಇಮಾಮರ ಮೊರೆಹೊಕ್ಕಿರುವುದು ಮುಸ್ಲಿಮರು ಪ್ರತ್ಯೇಕತಾವಾದಿಗಳು, ಕೋಮುವಾದಿಗಳು ಎಂದು ಪ್ರಚಾರ ಮಾಡಿಕೊಂಡು ಬಂದಿರುವ ಮಂದಿಯ ಮಾತಿಗೆ ಸಾಕ್ಷಿ ಒದಗಿಸಿದಂತಾಗುತ್ತದೆ. ಮುಸ್ಲಿಮರ ಜನಸಂಖ್ಯೆಗನುಗುಣವಾಗಿ ಅವರಿಗೆ ಪ್ರಾತಿನಿಧ್ಯ ಸಿಗಬೇಕೆಂಬ ವಾದವೂ ಹಿಂದೂ ಕೋಮುವಾದಿಗಳ ಪ್ರಚಾರಕ್ಕೆ ಬಲ ನೀಡುತ್ತದೆ.

ಜಾತ್ಯಾತೀತತೆಯ ರಕ್ಷಣೆಯ ಹೋರಾಟದ ಸೋಲು ಗೆಲುವು ಜಾತ್ಯಾತೀತ ತತ್ವದ ಆಚರಣೆಯಲ್ಲೇ ಇದೆ : ಧರ್ಮದ ಹೆಸರಿನಲ್ಲಿ ಸಮಾವೇಶ ನಡೆಸುವುದರಿಂದ ಜಾತ್ಯಾತೀತತೆ ಸಂರಕ್ಷಣೆ ಅಸಾಧ್ಯ. ಹಿಂದೂ ಸನಾತನವಾದಿಗಳು ಒಂದು ಮಾರ್ಗದಲ್ಲಿ ಹೊರಟಿದ್ದಾರೆ. ಉದ್ದೇಶಸಾಧನೆಗೆ ಅವರು ಶ್ರೀರಾಮ ದೇವರ ಮೊರೆಹೊಕ್ಕಿದ್ದಾರೆ. ಮುಸ್ಲಿಮರನ್ನು ಒಂದೇ ವೇದಿಕೆಯಲ್ಲಿ ಸಂಘಟಿಸುವ ಮೂಲಕ ಈ ಸವಾಲನ್ನು ತಾವು ಎದುರಿಸಬಹುದೆಂದು ಮುಸ್ಲಿಂ ನಾಯಕರು ತಿಳಿದರೆ ಅದು ಭೋಳೆತನವಾದೀತು. ಬದಲಾಗಿ ಅದರಿಂದ ಪ್ರತಿಕೂಲ ಪರಿಣಾಮವೇ ಉಂಟಾದೀತು.

ಮುಸ್ಲಿಂ ಮತದಾರರು ಉತ್ತರ ಭಾರತದಲ್ಲಿ ಶೇಕಡಾ ೧೨ ರಿಂದ ೧೩ ರಷ್ಟಿದ್ದಾರೆ. ಇತರ ಭಾಗಗಳಲ್ಲಿ ಅಷ್ಟುಕೂಡ ಇಲ್ಲ. ಹಿಂದಿನ ಚುನಾವಣೆಗಳ ಫಲಿತಾಂಶ ಗಮನಿಸಿದರೆ ಮುಸ್ಲಿಮರು ಎಂದೂ ಐಕ್ಯದಿಂದ ಒಬ್ಬನೇ ಅಭ್ಯರ್ಥಿಗೆ ಮತನೀಡಿದ ನಿದರ್ಶನ ಇಲ್ಲ. ಮುಸ್ಲಿಮರು ಬಿ.ಜೆ.ಪಿ.ಗೂ ಮತನೀಡಿದ್ದಾರೆ. ಇತರೆಲ್ಲಾ ಸಮುದಾಯಗಳಂತೆ ಅವರೂ ತಮಗೆ ಯಾವ ಪಕ್ಷ ಸಂರಕ್ಷಣೆ ಒದಗಿಸಬಲ್ಲುದೋ ಆ ಪಕ್ಷಕ್ಕೆ ವೋಟು ಹಾಕಿದ್ದಾರೆ. ಮುಸ್ಲಿಮರು ಈ ವರೆಗಿನ ತಮ್ಮ ಆಲೋಚನಾ ವಿಧಾನವನ್ನು ಹಠಾತ್ತನೆ ಕೈಬಿಟ್ಟು ಮಸೀದಿಯ ಮೆಟ್ಟಿಲುಗಳಿಂದ ಆಣತಿಯಾದುದನ್ನು ಪಾಲಿಸುವರೆಂದು ಈ ಮುಸ್ಲಿಂ ನಾಯಕರು – ಇವರೂ ಅಂತಹ ಚಾರಿತ್ರ್ಯ ವಂತರೇನೂ ಅಲ್ಲ – ಹೇಗೆ ಭಾವಿಸುತ್ತಾರೆ ? ಮುಸ್ಲಿಮರು ಸುಮಾರು ೧೦೦ ಕ್ಷೇತ್ರಗಳಲ್ಲಿ ತಕ್ಕಡಿಯನ್ನು ಏರುಪೇರು ಮಾಡಿಸಬಲ್ಲರು. ಆದರೆ ಮುಸ್ಲಿಮರು ಹೀಗೆ ಕೂಟ ರಚಿಸಿದರೆ ಹಿಂದೂಗಳ ವೋಟಿನ ಸಂಘಟನೆಗೂ ದಾರಿಯಾಗುತ್ತದೆ.

ಮುಸ್ಲಿಮರಲ್ಲಿ ಇಂದಿನಷ್ಟು ಅಭದ್ರತೆಯ ಭಾವನೆ ಹಿಂದೆಂದೂ ಇರಲಿಲ್ಲ ಎಂಬುದು ನಿಜವೇ. ಆಡಳಿತವು ಅವರ ವಿರುದ್ಧ ಪಕ್ಷಪಾತ ನಡೆಸಿದೆ. ಪೋಲೀಸ್ ಬಲದಲ್ಲಿ ಅವರ ವಿರುದ್ಧಶಕ್ತಿಗಳೇ ಇವೆ. ಕೆಲವು ಪ್ರದೇಶಗಳಲ್ಲಿ ಮುಸ್ಲಿಮರು ಆಕ್ರಮಣ ಶೀಲರಾಗಿದ್ದಾರೆ ಎಂಬುದೂ ನಿಜವೆ. ಆದರೆ ಇದು ಕೆಲವೇ ವ್ಯಕ್ತಿಗಳಿಗೆ ಹಾಗೂ ಸಣ್ಣ ಗುಂಪುಗಳಿಗೆ ಸೀಮಿತವಾಗಿದೆ. ಭಾರತದಲ್ಲಿ ಮುಸ್ಲಿಮರ ಪ್ರಮಾಣ ಕಡಿಮೆ. ಆಕ್ರಮಣ ಶೀಲತೆಯಿಂದ ಅವರಿಗೇ ಹಾನಿ. ಭಾರತದ ಮುಸ್ಲಿಮರು ಆಕ್ರಮಣಕಾರಿಯಾಗಿ ಅಥವ ಹತಾಶೆಯಿಂದ ತಪ್ಪಾಗಿ ವರ್ತಿಸಿದ್ದು ಭಯದ ಭಾವನೆ ಉಂಟಾದಾಗ ಮಾತ್ರ. ಮೂಲತಃ ಕೋಮು ಶಾಂತಿಪಾಲನೆಯ ಹೊಣೆಗಾರಿಕೆ ಬಹುಮತೀಯರದ್ದೇ ಆಗಿದೆ. ಹಿಂದೂ ಸಂಕುಚಿತ ವಾದಿಗಳ ಪ್ರಚಾರ ಈ ವಿಷಯವನ್ನೇ ಮುಸುಕು ಮಾಡಿದೆ.

ಮುಸ್ಲಿಮರ ಸಮಾವೇಶದ ಪರಿಣಾಮ ಕೆಟ್ಟದಾಗಲಿದೆ. ಅಲ್ಲೋ ಇಲ್ಲೋ ಮನಸಾಕ್ಷಿಯ ಧ್ವನಿಗಳಿದ್ದರೆ ಅದನ್ನು ಅಡಗಿಸುವ ಪ್ರಯತ್ನಕ್ಕೆ ಈ ಸಮಾವೇಶ ಒಂದು ನೆಪವಾಗಬಹುದು. ಮುಸ್ಲಿಮರಿನ್ನೂ ರಾಷ್ಟ್ರೀಯ ಮುಖ್ಯಪ್ರವಾಹಕ್ಕೆ ಸೇರಿಕೊಂಡಿಲ್ಲ ಎಂಬ ವಾದವನ್ನು ಮುಂದುಮಾಡಬಹುದು. ಆದರೆ ಮುಖ್ಯ ವಿಷಯವೆಂದರೆ ಈ ಮುಖ್ಯ ಪ್ರವಾಹವೇ ಕಲುಷಿತವಾಗಿದೆ. ಭಾರತೀಯ ರಾಷ್ಟ್ರೀಯತೆ ಬಲಗೊಳ್ಳುವ ಬದಲು ಹಿಂದೂ ರಾಷ್ಟ್ರೀಯತೆ ಮೇಲಕ್ಕೆದ್ದು ಬರುತ್ತಿದೆ.

ಮುಸ್ಲಿಮರನ್ನು ಧಾರ್ಮಿಕ ತಳಹದಿಯಲ್ಲಿ ಸಂಘಟಿಸುವ ಮೂಲಕ ಅವರ ನಾಯಕರು ವಿಭಜನೆಗೆ ಮೊದಲು ಹಾಗೂ ಅನಂತರ ದೇಶವು ಬೆಲೆ ತೆರಬೇಕಾಗಿ ಬಂದ ತಪ್ಪನ್ನೇ ಮತ್ತೆ ಮಾಡುತ್ತಿದ್ದಾರೆ. ಮುಸ್ಲಿಂ ಲೀಗ್ ಜತೆ ಸೇರಲು ಕಮ್ಯುನಿಸ್ಟರು ಹಾಗೂ ಇತರ ಜಾತ್ಯಾತೀತ ಶಕ್ತಿಗಳು ನಿರಾಕರಿಸಿರುವುದು ಸಮಾಧಾನದ ವಿಷಯವಾದರೂ ಕಾಂಗ್ರೆಸ್ (ಐ) ಮತ್ತೆ ಮುಸ್ಲಿಂ ಲೀಗ್ ಜತೆ ಸೇರುವ ಪ್ರಮಾದ ಮಾಡಿದೆ. ಮುಸ್ಲಿಂ ಲೀಗ್ ಮುಸ್ಲಿಮರ ಏಕತೆಯ ಆಧಾರದಲ್ಲಿ ಮತ ಕೇಳುತ್ತದೆ ಎಂಬ ರಾಜಕೀಯ ಲಾಭದ ಮೇಲೆ ಮಾತ್ರವೇ ಅವರ ದೃಷ್ಟಿ. ಜಾತ್ಯಾತೀತ ಹಾಗೂ ಕೋಮು ಶಕ್ತಿಗಳ ಮಧ್ಯೆ ಖಚಿತ ವ್ಯತ್ಯಾಸ ಉಳಿಸಿಕೊಳ್ಳಬೇಕಾದ್ದು ಅಗತ್ಯ ವಾಗಿದೆ. ಆದರೆ ಇಂತಹ ಮೈತ್ರಿಗಳಿಂದ ಆ ವ್ಯತ್ಯಾಸವೇ ನಶಿಸಿ ಹೋಗುತ್ತದೆ,

ಮುಸ್ಲಿಮರಿಗೆ ಜಾತ್ಯಾತೀತತೆ ಹೊರತು ಅನ್ಯ ಮಾರ್ಗವೇ ಇಲ್ಲ. ಶೇಕಡಾ ೮೦ ರಷ್ಟು ಹಿಂದುಗಳಿರುವ ಈ ದೇಶದಲ್ಲಿ ಮುಸ್ಲಿಮರಿಗೆ ಕಾನೂನಿನ ಮುಂದೆ ಸಮಾನತೆ ಒದಗಿಸುವ ಬೇರೆ ಯಾವ ವ್ಯವಸ್ಥೆಯೂ ಇಲ್ಲ. ಅವರಿಗೆ ನೈಜ ಅಹವಾಲುಗಳಿವೆ ಯಾದರೂ ಅವರು ಜಾತ್ಯಾತೀತತೆಯಲ್ಲಿ ವಿಶ್ವಾಸ ಕಳೆದುಕೊಂಡು ಪರಿಹಾರಕ್ಕಾಗಿ ಅನ್ಯಮಾರ್ಗಗಳನ್ನು ಅರಸಿದರೆ ಬಹುಮತೀಯ ಸಮುದಾಯಕ್ಕಿಂತಲೂ ಮುಸ್ಲಿ

ಮರಿಗೇ ಹೆಚ್ಚು ಹಾನಿಯಾದೀತು. ಹಿಂದುತ್ವದ ಪ್ರಜ್ಞೆ ಬೆಳೆಯುತ್ತಿದ್ದರೂ ಅದನ್ನು ಕಡಿಮೆ ಮಾಡುವ ಬಗೆಯನ್ನು ಮುಸ್ಲಿಮರೂ ಚಿಂತಿಸಬೇಕು. ಅದು ತೀವ್ರವಾದಿಗಳಾಗಿ ರೂಪಾಂತರಗೊಳ್ಳುವುದರಿಂದ ಅಲ್ಲ. ಇತರ ಜಾತ್ಯಾತೀತ ಶಕ್ತಿಗಳ ಜತೆ ಸೇರಿಕೊಂಡು ಆ ತತ್ವವನ್ನು ಬೆಳಗೊಳಿಸುವ ಮೂಲಕ ಹಿಂದುಗಳನ್ನು ಜಾತ್ಯಾತೀತ ಗೊಳಿಸುವ ಕಾರ್ಯ ಈಗ ಮುಸ್ಲಿಮರ ಹೆಗಲ ಮೇಲೆಯೇ ಬಿದ್ದಿದೆ– ಇದು ವಿಚಿತ್ರವಾದರೂ ಸತ್ಯ. ★

---

೧೨ ನೇ ಪುಟದಿಂದ........ ಚುನಾವಣೆ : ದಲಿತ ಸಂಘರ್ಷ

ದಲಿತ ಸಂಘರ್ಷ ಸಮಿತಿಯು ಕೆಲವರು ರಾಜಕಾರಣಕ್ಕೆ ಪ್ರವೇಶಿಸುತ್ತಿದ್ದಾರೆ. ಹಿಂದುಳಿದ ವರ್ಗದವರಿಗೆ ಸಾಮಾಜಿಕ ನ್ಯಾಯ ಒದಗಿಸುವ ಮಂಡಲ್ ವರದಿಯನ್ನು ಜಾರಿಗೆ ತರಲು ಜನತಾದಳ ಕೈಗೊಂಡ ತೀರ್ಮಾನ, ಹಾಗೂ ಜನತಾದಳ ಹಿಂದೂ ಮೂಲಭೂತವಾದಿಗಳ ವಿರುದ್ಧ ಸಾರಿರುವ ಸಮರ ಸಮ್ಮನ್ನು ಜನತಾ ದಳದೊಂದಿಗೆ ಗುರುತಿಸಿಕೊಳ್ಳಲ ಪ್ರೇರೇಪಿಸಿತು. ಕಳೆದ ೪ ದಶಕಗಳ ಕಾಂಗ್ರೆಸ್ ಆಡಳಿತದಲ್ಲಿ ದಲಿತರು, ಮುಸ್ಲಿಮರು ಹಿಂದುಳಿದ ವರ್ಗದ ಜನರು ಭ್ರಮನಿರಸನ ಹೊಂದಿದ್ದಾರೆ. ಕಾಂಗ್ರೈನ ಓಟಿನ ಬ್ಯಾಂಕುಗಳು ಛಿದ್ರಗೊಂಡಿದೆ. ಬಾಬ್ರಿ ಮಸೀದಿ ಹಾಗೂ ಮಂಡಲ್ ವರದಿಯ ಬಗ್ಗೆ ಜನತಾದಳ ತಗೆದುಕೊಂಡ ನಿಲುವಿನಿಂದಾಗಿ ಮುಸ್ಲಿಮರು ಮತ್ತು ಹಿಂದುಳಿದವರು ಈ ಸಾರಿ ಜನತಾದಳವನ್ನು ಬೆಂಬಲಿಸುವುದು ಖಚಿತ. ದಲಿತ ಸಂಘರ್ಷ ಸಮಿತಿಯ ನಿರ್ಧಾರದಿಂದಾಗಿ ದಲಿತರೂ ಈ ಸಾರಿ ಜನತಾದಳಕ್ಕೆ ಸಂಪೂರ್ಣ ಬೆಂಬಲ ನೀಡಲಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ರಾಜ್ಯದ ೨೮ ಲೋಕಸಭಾ ಕ್ಷೇತ್ರಗಳ ಪೈಕಿ ಕನಿಷ್ಠ ೧೪ ಕ್ಷೇತ್ರಗಳಲ್ಲಿ ಜನತಾದಳ–ಸಮಾಜವಾದಿ ಜನತಾಪಕ್ಷ, ದಲಿತ ಸಂಘರ್ಷ ಸಮಿತಿ ಹಾಗೂ ಕಮ್ಯೂನಿಸ್ಟ್ ಪಕ್ಷಗಳಿಂದ ಕೂಡಿದ ಪ್ರತಿಪಕ್ಷಗಳ ಮೈತ್ರಿಕೂಟ ಜಯಗಳಿಸಲಿದೆ. ಕರ್ನಾಟಕದಲ್ಲಿ ಬಿಜೆಪಿಗೆ ಯಾವುದೇ ಭವಿಷ್ಯವಿಲ್ಲ. ಮತೀಯ ಭಾವನೆಗಳನ್ನು ಕೆರಳಿಸಿ ಆ ಮೂಲಕ ಅಧಿಕಾರಕ್ಕೆ ಬರಬೇಕೆಂದು ಪ್ರಯತ್ನಿಸುತ್ತಿರುವ ಬಿಜೆಪಿಗೆ ಜನರು ಈ ಸಾರಿಯ ಚುನಾವಣೆಯಲ್ಲಿ ಸೂಕ್ತ ಪಾಠ ಕಲಿಸಲಿದ್ದಾರೆ. ರಾಮಮಂದಿರದ ವಿವಾದದಿಂದಾಗಿ ಬಿ.ಜೆ.ಪಿ. ಯಲ್ಲಿ ಶೇಕಡಾ ೧೦ರಷ್ಟು ಓಟು ಪಡೆಯಬಹುದಾದರೂ, ಇದರಿಂದ ಕಾಂಗ್ರೈಗೆ ಪೆಟ್ಟು ಬೀಳಬಹುದು. ಜಾತಿ ವ್ಯವಸ್ಥೆಯನ್ನು ಇಟ್ಟುಕೊಂಡು ಹಿಂದೂಗಳೆಲ್ಲಾ ಒಂದು ಎನ್ನುವುದು ಅರ್ಥಹೀನ,. ಬಿ.ಜಿ ಬಣಕಾರ್ ಎಲ್.ಜಿ. ಹಾವನೂರ್ ಮುಂತಾದವರು ಬಿ.ಜೆ.ಪಿ. ಸೇರುತ್ತಿರುವುದು "ಶುಭ ಸೂಚನೆ". ಇಂತಹ ವ್ಯಕ್ತಿಗಳು ಬಿ.ಜೆ.ಪಿ. ಸೇರುವುದರಿಂದ ಮುಂದೊಂದು ದಿನ ಬಿ.ಜೆ.ಪಿ. ಯಲ್ಲೂ ಭಿನ್ನಾಭಿಪ್ರಾಯಗಳು ಹುಟ್ಟಿಕೊಳ್ಳುತ್ತವೆ. ಪರಿಣಾಮವಾಗಿ ಪಕ್ಷ ಹೋಳಾಗುತ್ತದೆ. ★

ಪ್ರಣಾಳಿಕೆಗಳು ಏನು ಹೇಳುತ್ತವೆ

ಅಯೋಧ್ಯ ವಿವಾದ

ಕಾಂಗ್ರೆಸ್ (ಐ): ಸಂಧಾನ ಮೂಲಕ ಸಮಸ್ಯಾ ಪರಿಹಾರಕ್ಕೆ ಬದ್ಧ. ಅದು ಸಾಧ್ಯವಾಗದೇ ಇದ್ದಲ್ಲಿ ಎಲ್ಲ ಪಕ್ಷಗಳೂ ನ್ಯಾಯಾಲಯದ ತೀರ್ಪನ್ನು ಮನ್ನಿಸಬೇಕು. ಮಸೀದಿಯನ್ನು ಕೆಡವದೆ ದೇವಸ್ಥಾನದ ನಿರ್ಮಾಣವಾಗಬೇಕು. ೧೯೪೭ ಆಗಸ್ಟ್ ೧೫ ರಂದು ಇದ್ದ ಪೂಜಾಸ್ಥಾನಗಳನ್ನು ಯಥಾವತ್ತಾಗಿ ಉಳಿಸಿಕೊಂಡು ಬರುವುದು. ಹೊಸ ಸಮಸ್ಯೆ ತನ್ನ ತಲೆ ಎತ್ತದಂತೆ ನೋಡಿಕೊಳ್ಳುವುದು.

ರಾಷ್ಟ್ರೀಯ ರಂಗ : ಸಂಧಾನದ ಮೂಲಕ ಪರಿಹಾರವಾಗಬೇಕು ಇಲ್ಲವೆ ಕಾನೂನು ಮೂಲಕ ೧೯೪೭ ಆಗಸ್ಟ್ ೧೫ ರಂದು ಇದ್ದ ಪೂಜಾಸ್ಥಾನಗಳನ್ನು ಹಾಗೆಯೇ ಉಳಿಸಿಕೊಂಡು ಬರುವುದು.

ಬಿ.ಜೆ.ಪಿ.: ಎಲ್ಲ ಗೌರವಗಳೊಂದಿಗೆ ಮಸೀದಿಗೆ ಬೇರೊಂದು ನಿವೇಶನವನ್ನು ಕೊಟ್ಟು ರಾಮ ಮಂದಿರವನ್ನು ಕಟ್ಟುವುದು.

ಎಸ್.ಜೆ..ಪಿ. : ಸಂಧಾನ, ಇಲ್ಲವೆ ನ್ಯಾಯಾಂಗದ ತೀರ್ಪು

ಸಿ.ಪಿ.ಎಂ. : ಸಂಧಾನ ಇಲ್ಲವೆ ನ್ಯಾಯಾಂಗ ತೀರ್ಪು. ೧೯೪೭ ಆಗಸ್ಟ್ ೧೫ ರಂದು ಇದ್ದ ಸ್ಥಿತಿಯನ್ನು ಮುಂದುವರಿಸುವುದು.

ಸಿ.ಪಿ.ಐ.: ಸಂಧಾನ ಇಲ್ಲವೆ ನ್ಯಾಯಾಂಗ ತೀರ್ಪು. ೧೯೪೭ ಆಗಸ್ಟ್ ೧೫ ರಲ್ಲಿ ಇದ್ದಂತೆ ಪರಿಸ್ಥಿತಿ ಮುಂದುವರಿಯುವುದು.

ಮೀಸಲಾತಿ:

ಕಾಂಗ್ರೆಸ್ (ಐ) : ಪರಿಸ್ಥಿತಿ ಜಾತಿ ಮತ್ತು ಗುಂಪುಗಳಿಗೆ ಹಾಗೂ ಸಾಮಾಜಿಕ ವಾಗಿಯೂ ಶೈಕ್ಷಣಿಕವಾಗಿಯೂ ಹಿಂದುಳಿದಿರುವವರಿಗೆ; ಇವರಲ್ಲಿ ಹೆಚ್ಚು ಬಡವರಾಗಿರುವವರಿಗೆ ಆದ್ಯತೆ. ಈಗ ಮೀಸಲಾತಿಗೆ ಒಳಪಡದೆ ಇರುವ ಆದರೆ ಆರ್ಥಿಕವಾಗಿ ಹಿಂದುಳಿದಿರುವವರಿಗೂ ಮೀಸಲಾತಿ ಅನ್ವಯವಾಗುವುದು. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗುವುದು.

ರಾಷ್ಟ್ರೀಯ ರಂಗ : ಮಂಡಲ ಆಯೋಗದ ಶಿಫಾರಿಸಿನಂತೆ ಶೇಕಡಾ ೨೭ರ ಮೀಸಲಾತಿಯನ್ನು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದವರಿಗೂ ಕೊಡಬೇಕೆಂಬ ತೀರ್ಮಾನವನ್ನು ಪೂರ್ತಿಯಾಗಿ ಜಾರಿಗೆ ತರಲಾಗುವುದು. ಮಂಡಲ ಆಯೋಗದ ಶಿಫಾರಿಸಿನಿಂದ ಹೊರಗೆ ಉಳಿದಿರುವಂಥ ಆರ್ಥಿಕವಾಗಿ ಹಿಂದೆ ಬಿದ್ದಿರುವವರಿಗೂ ಶೇಕಡಾ ೫ ರಿಂದ ೧೦ರವರೆಗೆ ಉದ್ಯೋಗಗಳನ್ನು ಕಾಯ್ದಿರಿಸಲಾಗುವುದು. ಮಂಡಲ

ಆಯೋಗದ ವರದಿಯಲ್ಲಿಯ ಲೋಪದೋಷಗಳನ್ನು ತಿದ್ದಲು ಪರಿಣಿತರ ಸಮಿತಿಯೊಂದನ್ನು ರಚಿಸಲಾಗುವುದು.

ಬಿ.ಜೆ.ಪಿ.: ಬಡವರಿಗೆ ಆದ್ಯತೆ ಕೊಡುವುದರ ಮೂಲಕ ಮಂಡಳ ಆಯೋಗದ ಶಿಫಾರಿಸಿನ ಮೇರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿ, ಬೇರೆ ಜಾತಿಯಲ್ಲಿಯ ಆರ್ಥಿಕವಾಗಿ ಹಿಂದುಳಿದವರಿಗೂ ಮೀಸಲಾತಿಯ ಸೌಲಭ್ಯದ ವಿಸ್ತರಣೆ.

ಎಸ್.ಜೆ.ಪಿ ಮಂಡಲ ಶಿಫಾರಸುಗಳನ್ನು 'ವೈಜ್ಞಾನಿಕ ರೀತಿ' ಯಲ್ಲಿ ಅನುಷ್ಠಾನಗೊಳಿಸಲಾಗುವುದು. ಇತರ ಉನ್ನತ ಜಾತಿಯಲ್ಲಿಯ ಬಡವರಿಗೂ ನ್ಯಾಯದೊರಕಿಸಿಕೊಡಲಾಗುವುದು.

ಸಿ.ಪಿ.ಎಂ : ಮಂಡಲ ಆಯೋಗದ ಶಿಫಾರಸುಗಳ ಕಾರ್ಯಾನ್ವಯವನ್ನು ಸಮರ್ಥಿಸುತ್ತದೆ; ಆದರೆ, ಕರ್ಪೂರಿ ಠಾಕೂರ ಸೂತ್ರವೇ ಸರ್ವ ಸಮ್ಮತಿಗೆ ಆಧಾರವಾಗಬೇಕೆಂಬ ಅನಿಸಿಕೆ. ಉನ್ನತ ಜಾತಿಗಳಲ್ಲಿಯ ಬಡವರೂ ಪ್ರಯೋಜನ ಹೊಂದಬೇಕು. ಮೀಸಲಾತಿಯು ಒಂದು ರಚನಾತ್ಮಕ ಕಾರ್ಯಕ್ರಮವೆಂದು ಅದನ್ನು ಸಮರ್ಥಿಸಿದರೂ ಕೂಡ ಬಡವರ ಹಾಗೂ ಹಿಂದುಳಿದವರ ಸಮಸ್ಯೆಗಳ ಪರಿಹಾರಕ್ಕೆ ತೀವ್ರತಮವಾದ ಭೂಸುಧಾರಣೆ ಮತ್ತು ಗ್ರಾಮಗಳಲ್ಲಿಯ ಜಾತಿಪದ್ಧತಿಗಳ ನಿರ್ಮೂಲನ ಕೈಗೊಳ್ಳಬೇಕು.

ಸಿ.ಪಿ.ಐ. ಮಂಡಲ ಶಿಫಾರಸುಗಳ ಅನುಷ್ಠಾನವನ್ನು ಸಂಪೂರ್ಣವಾಗಿ ಸಮರ್ಥಿಸುತ್ತದೆ. ಉನ್ನತ ಜಾತಿಗಳಲ್ಲಿಯ ಬಡವರಿಗೆ ಶೇ. ೧೦ ರಷ್ಟು ಉದ್ಯೋಗಗಳ ಮೀಸಲಾತಿಯನ್ನು ಬಯಸುತ್ತದೆ.

ಅಲ್ಪ ಸಂಖ್ಯಾತರ ಬಗ್ಗೆ :

ಕಾಂಗ್ರೆಸ್ ಐ : ಅಲ್ಪಸಂಖ್ಯಾತರ ಎಲ್ಲ ಸಂವಿಧಾತ್ಮಕ ಮತ್ತು ಶಾಸಕೀಯ ಹಕ್ಕುಗಳ ರಕ್ಷಣೆ ಮತ್ತು ಅವರ ನ್ಯಾಯಯುತ ಹಿತ ಸಕ್ತಿಗಳ ರಕ್ಷಣೆ. ಕೋಮುಗಲಭೆಗಳ ಅಪರಾಧಿಗಳನ್ನು ಶಿಕ್ಷಿಸಲು ವಿಶೇಷ ನ್ಯಾಯಸ್ಥಾನಗಳ ಸ್ಥಾಪನೆ. ಪೋಲೀಸ್ ಪಡೆಯನ್ನು ನಿರ್ಮಿಸುವುದು. ಸೂಕ್ಷ್ಮ ಪ್ರದೇಶಗಳಲ್ಲಿ ಶಾಂತಿ ಸಮಿತಿಗಳನ್ನು ನಿರ್ಮಿಸುವುದು. ಕೋಮುಗಲಭೆ ಪೀಡಿತಗೆ ತ್ವರಿತವಾಗಿ ಪರಿಹಾರದ ಹಂಚಿಕೆ. ಗಲಭೆಯಲ್ಲಿ ಮೃತರಾದವರ ಹತ್ತಿರದ ಸಂಬಂಧಿಗಳಿಗೆ ಉದ್ಯೋಗ ಕೊಡುವುದು. ಸಾರ್ವಜನಿಕ ಮತ್ತು ಖಾಸಗಿವಲಯಗಳಲ್ಲಿ ಅಲ್ಪ ಸಂಖ್ಯಾತರಿಗೆ ಯೋಗ್ಯ ಪ್ರತಿನಿಧಿತ್ವ ದೊರಕಿಸಿಕೊಡುವುದು ಮತ್ತು ಕೋಮುಗಲಭೆಗಳಿಗೆ ಕಾರಣವಾಗುವ ಅಧಿಕಾರಿಗಳನ್ನು ಶಿಕ್ಷಿಸುವುದು. ಅಲ್ಪ ಸಂಖ್ಯಾತರಲ್ಲಿ ಶಿಕ್ಷಣದ ಪ್ರಗತಿಯನ್ನು ಸಾಧಿಸಲು ನೆರವಾಗುವುದು ಮತ್ತು ಸಹಕಾರ ಸಂಘಗಳನ್ನು ಸ್ಥಾಪಿಸುವುದು. ಅಲ್ಪ ಸಂಖ್ಯಾತರ ಆಯೋ

ಗಕ್ಕೆ ಶಾಸಕೀಯ ಅಧಿಕಾರ ಕೊಡುವುದು.

ರಾಷ್ಟ್ರೀಯ ರಂಗ : ಕೋಮುಗಲಭೆಗಳನ್ನು ತಡೆಗಟ್ಟುವುದು ಮತ್ತು ನಿಷ್ಪಕ್ಷಪಾತವಾದ ಕ್ರಮಕೈಗೊಳ್ಳಲು ಗಲಭೆ ಹತ್ತಿಕ್ಕುವ ಪಡೆ ನಿರ್ಮಿಸುವುದು. ನೊಂದವರಿಗೆ ಪೂರ್ಣ ಪರಿಹಾರ, ಅಧಿಕಾರಿಗಳ ವಿರುದ್ಧ ಕ್ರಮ, ಸಾಕಷ್ಟು ಉದ್ಯೋಗಗಳ ನಿರ್ಮಾಣ.

ಬಿ. ಜೆ.ಪಿ.: ಅಲ್ಪ ಸಂಖ್ಯಾತರ ಪ್ರಗತಿ ಮತ್ತು ಅಭಿವೃದ್ಧಿಗೋಸ್ಕರ ಶಾಂತಿ ಮತ್ತು ರಕ್ಷಣೆಯ ಭರವಸೆ ಕೊಡುತ್ತದೆ. ಅಲ್ಪಸಂಖ್ಯಾತರು ತಮ್ಮ ಸ್ವಂತ ಶಾಲೆಗಳನ್ನು ನಡೆಸಲು ಅವಕಾಶ ಕೊಡುವಂಥ, ಧರ್ಮನಿರಪೇಕ್ಷವಾಗಿ ಎಲ್ಲ ಗೂ ನ್ಯಾಯ ಮತ್ತು ಸಮಾನತೆಯನ್ನು ದೊರಕಿಸಿಕೊಡುವಂಥ ರೀತಿಯಲ್ಲಿ ೩೦ನೇ ಪರಿಚ್ಛೆದವನ್ನು ತಿದ್ದುಪಡಿ ಮಾಡಲಾಗುವುದು. ಕೋಮುಗಲಭೆಗಳು ಸಂಭವಿಸಿದಲ್ಲಿ ವಿಚಾರಣೆ ಏರ್ಪಡಿಸಲಾಗುವುದು. ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ಹಾಗೂ ನೊಂದವರಿಗೆ ಪರಿಹಾರ ಕೊಡಲಾಗುವುದು. ಪೋಲೀಸ್ ಇಲಾಖೆಯು ಹೆಚ್ಚು ದಕ್ಷತೆ ಉಳ್ಳಂತೆ ಮಾಡುವುದು ಮತ್ತು ಜಿಲ್ಲಾ ಆಡಳಿತಗಾರರನ್ನು ಆಯಾ ಜಿಲ್ಲೆಯ ಶಾಂತಿಸ್ಥಾಪನೆಗೆ ಜವಾಬ್ದಾರರಾಗುವಂತೆ ಮಾಡಲಾಗುವುದು. ಅಲ್ಪ ಸಂಖ್ಯಾತರ ಆಯೋಗದ ಸ್ಥಾನದಲ್ಲಿ ಮಾನವ ಹಕ್ಕುಗಳ ಆಯೋಗವನ್ನು ಸ್ಥಾಪಿಸಿ ಸಮಾಜದ ಎಲ್ಲ ವರ್ಗಕ್ಕೆ ನ್ಯಾಯವನ್ನು ದೊರಕಿಸಿಕೊಡುವುದು.

ಎಸ್.ಜೆ ಪಿ.: ಎಲ್ಲ ವಿವಾದಗಳನ್ನೂ ಜಗಳ ಮತ್ತು ಹಿಂಸೆ ಇಲ್ಲದೆ ಪರಿಹರಿಸುವುದು. ಅಲ್ಪ ಸಂಖ್ಯಾತರಿಗೆ ಸಾಮಾಜಿಕ ಮತ್ತು ಆರ್ಥಿಕ ಅವಕಾಶಗಳನ್ನು ಕೊಡುತ್ತಾ ಎಲ್ಲ ಧರ್ಮಗಳು ಜಾತಿಗಳು ಮತ್ತು ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ಸಮಾನ ಅವಕಾಶಗಳನ್ನು ಕಲ್ಪಿಸುವುದು. ಧರ್ಮ ಸಹಿಷ್ಣುತೆಯನ್ನು ಪ್ರೋತ್ಸಾಹಿಸುವುದು ಮತ್ತು ಧಾರ್ಮಿಕ ಅಂಧತ್ವವನ್ನು ಹೋಗಲಾಡಿಸುವುದು. ವಿಶೇಷ ಪರಿಣಿತಿ ಪಡೆದ ಪೋಲೀಸ್ ಪಡೆಯನ್ನು ರಚಿಸುವುದು; ಅದುವೇ ಶಾಂತಿ ಸುರಕ್ಷಾ ಬಲ.

ಸಿ.ಪಿ.ಎಂ.: ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆಯ ಸಮರ್ಥನೆ, ಆರ್ಥಿಕ ಮತ್ತು ಸಾಮಾಜಿಕ ಭೇದಭಾವಗಳ ನಿರಾಕರಣೆ, ಅಭಿವೃದ್ಧಿಶೀಲ ನೀತಿಗಳ ಸಮರ್ಥನೆ, ಕೋಮುಭಾವನೆಯ ಮತ್ತು ಮೂಲಭೂತವಾದಿ ಪುಂಡರನ್ನು ಪೂಜಿಸಬೇಡಿರೆಂದೂ ಮತ್ತು ಅನ್ಯಾಯ ಹಾಗೂ ಶೋಷಣೆಯ ವಿರುದ್ಧ ನಡೆಯುತ್ತಿರುವ ಇತರ ಪ್ರಜಾತಾಂತ್ರಿಕ ಆಂದೋಲನಗಳ ಜೊತೆಗೆ ಸಹಕರಿಸುವುದರ ಮೂಲಕವೇ ಅಲ್ಪಸಂಖ್ಯಾತರ ಹೋರಾಟಕ್ಕೆ ಜಯ ಸಿಗುತ್ತದೆಂದು ಅರಿಯಬೇಕೆಂದೂ ಕರೆಕೊಡುತ್ತದೆ.

ಸಿ.ಪಿ.ಐ: ಎಲ್ಲ ಜನರಲ್ಲಿ ಶಾಂತಿ ಮತ್ತು ಐಕ್ಯತೆ, ಕೋಮು ಸೌಹಾರ್ದತೆ, ಅಲ್ಪ ಸಂಖ್ಯಾತರ ಹಕ್ಕು ಮತ್ತು ಹಿತಾಸಕ್ತಿಗಳ ರಕ್ಷಣೆಯ ಭರವಸೆ ಕೊಡುತ್ತದೆ. ಶಾಂತಿ ಸ್ಥಾಪನಾ ಪಡೆಯನ್ನು ಸ್ಥಾಪಿಸಲಾಗುವುದು. ಇದರಲ್ಲಿ ಎಲ್ಲ ವರ್ಗಗಳ ಪ್ರಾತಿನಿಧ್ಯವಿರುತ್ತದೆ. ★

ಜನಪದ ಸೇವಾ ಟ್ರಸ್ಟ್ ಪ್ರಕಟಣೆಗಳು

ಒಂದು ಹುಲ್ಲಿನ ಕ್ರಾಂತಿ

ಪ್ರಾಕೃತಿಕ ವ್ಯವಸಾಯ–ಒಂದು ಪರಿಚಯ

ಮೂಲ : ಮಸನೋಬು ಫುಕುವೊಕಾ; ಕನ್ನಡಾನುವಾದ : ಸಂತೋಷ್ ಕೌಲಗಿ; ಬೆಲೆ : 15 ರೂ.

ಮನುಕುಲ ವಿನಾಶ : ಬಾಂಬ್ ಬೇಕಿಲ್ಲ ಅಣುಸ್ಥಾವರ ಸಾಕು

ಡಾ॥ಎ. ಎಸ್. ನಾಗರಾಜ್

ಬೆಲೆ : 2–00 ರೂ.

ಮಾರಾಟಕ್ಕೆ

ಸಹಜ ಕೃಷಿ : ಒಂದು ಪರಿಚಯ

ಲೇಖಕರು : ಪೂರ್ಣಚಂದ್ರ ತೇಜಸ್ವಿ

ಬೆಲೆ : ೬/=ರೂ

ಕಾವ್ಯಸುಧಾ : ಎಂ. ಎಸ್. ನರಸಿಂಹಮೂರ್ತಿ

ಬೆಲೆ : 12–00 ರೂ.

ಕಾಂಪೋಸ್ಟ್ ಗೊಬ್ಬರದ ಚಮತ್ಕಾರ

–ಬೆಲೆ5:00 ರೂ.

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ